# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 297 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 05.06.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 297 • PRGI No:KARKAN/2023/88055 • VIJAYANAGARA • 05.06.2025 • Thursday • Page:04 • Rs:2



ಹಂಪಿ ಟೈಮ್ಸ್ HAMPI TIMES Kannada Daily

BOOK SPACE
as your requirement
Special Offer Just For You!
Special Discount
And Free Creative
Support



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com







# ಕೋಟ್ಯಂತರ ಹೃದಯ ಗೆದ್ದ ಆರ್‌ಸಿಬಿ

## ಆರ್‌ಸಿಬಿ 18 ವರ್ಷಗಳ ಕನಸು ನನಸು | ಕಪ್ ನಮ್ದೇ ಈಗ ಐತಿಹಾಸಿಕ ಸತ್ಯ






■ **ಹಂಪಿ ಟೈಮ್ಸ್ ಹೊಸಪೇಟೆ**

2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದಲೂ, ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ತಂಡದ ಅಭಿಮಾನಿಗಳ ಒಂದೇ ಒಂದು ಕನಸು, ಒಂದೇ ಒಂದು ಘೋಷಣೆ "ಈ ಸಲ ಕಪ್ ನಮ್ದೇ!" 18 ವರ್ಷಗಳ ಸುದೀರ್ಘ ಕಾಯುವಿಕೆ, ನಿರಂತರ ಬೆಂಬಲ, ಏಳು-ಬೀಳುಗಳನ್ನು ನೋಡಿದ ಅಭಿಮಾನಿಗಳಿಗೆ 2025ರ ಐಪಿಎಲ್ ಆ ಮರೆಯಲಾಗದ ಐತಿಹಾಸಿಕ ಕ್ಷಣವನ್ನು ತಂದುಕೊಟ್ಟಿದೆ. ಹೌದು, ಈ ಸಲ ನಿಜವಾಗಿಯೂ ಕಪ್ ನಮ್ದೇ ಆಗಿದೆ. ಆರ್‌ಸಿಬಿ ತನ್ನ ಸುದೀರ್ಘ ಕನಸನ್ನು ನನಸು ಮಾಡಿಕೊಂಡು, ಚೊಚ್ಚಲ ಐಪಿಎಲ್ ಟ್ರೋಫಿಯನ್ನು ಎತ್ತಿಹಿಡಿದಿರುವುದಕ್ಕೆ ಸಿಎಂ ಸಿದ್ದರಾಮಯ್ಯ ಅವರು ಟೀಂಗೆ ಅಭಿನಂದನೆ ಸಲ್ಲಿಸಿದರು.

**ಸಮರ್ಪಣೆ, ಶಿಸ್ತು ಮತ್ತು ತಂಡದ ಒಗ್ಗಟ್ಟು**

ಈ ಬಾರಿಯ ಆರ್‌ಸಿಬಿ ತಂಡವು ಕೇವಲ ಸ್ಟಾರ್ ಆಟಗಾರರ ಸಮೂಹವಾಗಿರಲಿಲ್ಲ. ಅದು ಸಮರ್ಪಣೆ, ಶಿಸ್ತು ಮತ್ತು ಅಪೂರ್ವ ತಂಡದ ಒಗ್ಗಟ್ಟಿನ ಪ್ರತೀಕವಾಗಿತ್ತು. ನಾಯಕ ರಜತ್ ಪಾಟೀದರ್ ಅವರ ನಾಯಕತ್ವ, ವಿರಾಟ್ ಕೊಹ್ಲಿ ಅವರ ಅಪ್ರತಿಮ ಬ್ಯಾಟಿಂಗ್ ಮತ್ತು ಇಡೀ ತಂಡದ ಹೋರಾಟದ ಮನೋಭಾವ ಈ ಐತಿಹಾಸಿಕ ಗೆಲುವಿಗೆ ಪ್ರಮುಖ ಕಾರಣವಾಯಿತು. ಪ್ರತಿ ಪಂದ್ಯದಲ್ಲೂ ಒಂದಲ್ಲ ಒಂದು ಆಟಗಾರ ಹೀರೋ ಆಗಿ ಹೊರಹೊಮ್ಮಿ ತಂಡಕ್ಕೆ ನೆರವಾಯಿತು. ಕೇವಲ ಬ್ಯಾಟಿಂಗ್ ಮೇಲೆ ಅವಲಂಬಿತವಾಗದೆ, ಬೌಲಿಂಗ್ ವಿಭಾಗವೂ ಪ್ರಮುಖ ಘಟ್ಟಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿತು.

**ಟೀಂ ನಾಯಕನಿಗೆ ವಿರಾಟ್ ಕೊಹ್ಲಿ ಪ್ರೇರಣೆ**

ವಿರಾಟ್ ಕೊಹ್ಲಿ, ಆರ್‌ಸಿಬಿಯ ಆತ್ಮ. ಅವರ ಶತಕಗಳು, ಅರ್ಧಶತಕಗಳು ಮತ್ತು ಮೈದಾನದಲ್ಲಿನ ಅವರ ಶಕ್ತಿ ತಂಡಕ್ಕೆ ಹೊಸ ಹುಮ್ಮಸ್ಸು ತಂದಿದ್ದವು. ಈ ಬಾರಿ ಅವರು 35 ಎಸೆತದಲ್ಲಿ 43 ರನ್ ಗಳಿಸಿ, ತಂಡದ ಯುವ ಆಟಗಾರರಿಗೆ ಮಾರ್ಗದರ್ಶನ ನೀಡುತ್ತಾ, ಒತ್ತಡದ ಪರಿಸ್ಥಿತಿಯಲ್ಲಿ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸಿದರು. ರಜತ್ ಪಾಟೀದರ್ ಅವರ ಶಾಂತ ಸ್ವಭಾವದ ನಾಯಕತ್ವ, ಆಟಗಾರರಿಗೆ ಸ್ವಾತಂತ್ರ್ಯ ನೀಡಿ, ಅವರ ಸಾಮರ್ಥ್ಯವನ್ನು ಹೊರತರಲು ನೆರವಾಯಿತು.

**ಒಂದಾದ ಬೌಲಿಂಗ್ ಮತ್ತು ಬ್ಯಾಟಿಂಗ್ ವಿಭಾಗ**

ಕಳೆದ ವರ್ಷಗಳಲ್ಲಿ ಆರ್‌ಸಿಬಿಗೆ ಬೌಲಿಂಗ್ ಒಂದು ದುರ್ಬಲ ವಿಭಾಗವಾಗಿ ಪರಿಣಮಿಸಿತ್ತು. ಆದರೆ, ಈ ಬಾರಿ ಅದು ತಂಡದ ಬಲವಾಯಿತು. ಅನುಭವಿ ಸ್ಪಿನ್ನರ್‌ಗಳ ಮ್ಯಾಜಿಕ್, ಮತ್ತು ಹೊಸ ಪ್ರತಿಭೆಗಳ ಮಿಂಚು ವಿರೋಧಿ ತಂಡಗಳಿಗೆ ಸವಾಲಾಗಿ ಪರಿಣಮಿಸಿತು. ಬ್ಯಾಟಿಂಗ್ ಎಂದಿನಂತೆ ಬಲಿಷ್ಠವಾಗಿದ್ದರೂ, ಪ್ರಮುಖ ಸಂದರ್ಭಗಳಲ್ಲಿ ಮಧ್ಯಮ ಕ್ರಮಾಂಕದ ಆಟಗಾರರು ಸಹ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ, ತಂಡಕ್ಕೆ ಬೃಹತ್ ಮೊತ್ತವನ್ನು ಪೇರಿಸಲು, ಕಠಿಣ ಗುರಿಗಳನ್ನು ಬೆನ್ನಟ್ಟಲು ನೆರವಾದರು.

**ಅಭಿಮಾನಿಗಳ ನಿರಂತರ ಬೆಂಬಲಕ್ಕೆ ಸಿಕ್ಕ ಪ್ರತಿಫಲ**

ಆರ್‌ಸಿಬಿ ಅಭಿಮಾನಿಗಳು ವಿಶ್ವದ ಅತ್ಯಂತ ಭಾವೋದ್ರಿಕ್ತ ಮತ್ತು ನಿಷ್ಠಾವಂತ ಅಭಿಮಾನಿಗಳಾಗಿದ್ದಾರೆ. ಸೋತಾಗಲೂ ತಂಡವನ್ನು ಬೆಂಬಲಿಸಿ, "ಈ ಸಲ ಕಪ್ ನಮ್ದೇ" ಎಂದು ಕೂಗಿದ ಅಭಿಮಾನಿಗಳ ತಾಳ್ಮೆ ಮತ್ತು ಪ್ರೀತಿಗೆ ಈ ಬಾರಿ ಪ್ರತಿಫಲ ಸಿಕ್ಕಿದೆ. ವಿಜಯನಗರ ಜಿಲ್ಲೆ ಸೇರಿದಂತೆ ರಾಜ್ಯದಾದ್ಯಂತ ಮತ್ತು ವಿಶ್ವದಾದ್ಯಂತ ಆರ್‌ಸಿಬಿ ಅಭಿಮಾನಿಗಳು ತಮ್ಮ ನೆಚ್ಚಿನ ತಂಡದ ಗೆಲುವನ್ನು ಸಂಭ್ರಮದಿಂದ ಆಚರಿಸಿದ್ದಾರೆ. ಸಾಮಾಜಿಕ ಜಾಲತಾಣಗಳು ಕೆಂಪು ಮತ್ತು ಸುವರ್ಣ ಬಣ್ಣದಿಂದ ತುಂಬಿ ತುಳುಕಿದವು. ಇದು ಕೇವಲ ಬೆಂಗಳೂರು ತಂಡದ ಗೆಲುವಲ್ಲ, ಇದು ಒಂದು ಜನರ ಕನಸು ನನಸಾದ ಕ್ಷಣ.

**ಐತಿಹಾಸಿಕ ತಿರುವು:** 18 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಹಲವಾರು ಏರಿಳಿತಗಳು, ಸೋಲುಗಳು, ಮತ್ತು ನಿರಾಶೆಗಳಿದ್ದವು. ಆದರೆ, ಈ ಬಾರಿ ಎಲ್ಲವೂ ಬದಲಾಯಿತು. ಆರ್‌ಸಿಬಿ ತಂಡ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿ, ಐಪಿಎಲ್ ಟ್ರೋಫಿಯನ್ನು ಎತ್ತಿಹಿಡಿಯುವ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿದೆ. "ಕಪ್ ನಮ್ದೇ" ಎಂಬ ಘೋಷಣೆ ಈಗ ಕೇವಲ ಆಶಯವಲ್ಲ, ಅದು ಐತಿಹಾಸಿಕ ಸತ್ಯವಾಗಿದೆ. ಈ ಗೆಲುವು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲೂ ಪ್ರತಿಯೊಬ್ಬ ಕ್ರಿಕೆಟ್ ಪ್ರೇಮಿಯ ಕನಸನ್ನು ನನಸು ಮಾಡಿದೆ. ಆರ್‌ಸಿಬಿ ಪಂಜಾಬ್‌ನ್ನು ಮಣಿಸಿ ಕೇವಲ ಒಂದು ಟ್ರೋಫಿಯನ್ನಷ್ಟೇ ಗೆಲ್ಲಲಿಲ್ಲ, ಕೋಟ್ಯಂತರ ಹೃದಯಗಳನ್ನು ಗೆದ್ದಿದದ್ದಾರೆ.




ಐಪಿಎಲ್ ಕಪ್ ನಮ್ದೇ ಆರ್‌ಸಿಬಿ ಗೆಲುವಿನ ಸಂಭ್ರಮವನ್ನು ಹರಿಹರದ ಕೆ.ಅಭಿಲಾಷ್ ಮತ್ತು ವೈಷ್ಣವಿ ಕೆ. ಅವರು ತಮ್ಮ ಮುದ್ದು ಕಂದ ಯುವರಾಜ್ ಕೈಗೆ ಬ್ಯಾಟ್ ನೀಡಿ ಸಂಭ್ರಮಿಸಿದ್ದು ಹೀಗೆ.



ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ನಿತ್ಯವೂ ಹಸಿರಾಗಲಿ

ಇಂದು ಜೂನ್ 5, ವಿಶ್ವ ಪರಿಸರ ದಿನ. ಪ್ರತಿ ವರ್ಷವೂ ಈ ದಿನವನ್ನು ಆಚರಿಸುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಲಾಗುತ್ತದೆ. ಆದರೆ, ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗದೆ, ಪ್ರತಿದಿನವೂ ಪರಿಸರ ಸ್ನೇಹಿ ಯಾಗಿ ಬದುಕುವ, ನಮ್ಮ ಸುತ್ತಮುತ್ತಲಿನ ವಾತಾ ವರಣವನ್ನು ಹಸಿರಾಗಿಸುವ ಮತ್ತು ಮಾಲಿನ್ಯ ಮುಕ್ತವಾಗಿಸುವ ಸಂಕಲ್ಪ ಮಾಡಬೇಕಾದ ಅನಿವಾರ್ಯತೆ ಇದೆ.

**ಏಕೆ ಪರಿಸರ ಸಂರಕ್ಷಣೆ?:** ನಮ್ಮೆಲ್ಲರ ಬದುಕಿಗೆ ಮೂಲಾಧಾರವೇ ಪರಿಸರ. ಶುದ್ಧ ಗಾಳಿ, ನೀರು, ಫಲವತ್ತಾದ ಭೂಮಿ ಮತ್ತು ಸಮೃದ್ಧ ಜೀವ ವೈವಿಧ್ಯತೆಯಿಲ್ಲದೆ ಮಾನವ ಅಸ್ತಿತ್ವ ಅಸಾಧ್ಯ. ಕೈಗಾರಿಕೀಕರಣ, ನಗರೀಕರಣ ಮತ್ತು ಮಾನವನ ಅತಿಯಾದ ಹಸ್ತಕ್ಷೇಪದಿಂದಾಗಿ ಪರಿಸರ ಅಸಮತೋಲನ ಗೊಂಡಿದೆ. ವಾಯು ಮಾಲಿನ್ಯ, ಜಲ ಮಾಲಿನ್ಯ, ಪ್ಲಾಸ್ಟಿಕ್ ಮಾಲಿನ್ಯ, ಅರಣ್ಯನಾಶ ಮತ್ತು ಹವಾಮಾನ ಬದಲಾವಣೆ ಯಂತಹ ಜಾಗತಿಕ ಸಮಸ್ಯೆಗಳು ನಮ್ಮನ್ನು ಆವರಿಸಿವೆ. ಇವು ಮಾನವನ ಆರೋಗ್ಯದ ಮೇಲೆ, ಜೀವ ವೈವಿಧ್ಯತೆಯ ಮೇಲೆ ಮತ್ತು ಒಟ್ಟಾರೆ ಭೂಮಿಯ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ.

**ನಿತ್ಯವೂ ಹಸಿರಾಗಲಿ:** ಮರಗಳನ್ನು ನೆಡುವುದು, ಅವುಗಳನ್ನು ಪೋಷಿಸುವುದು ಪರಿಸರ ಸಂರಕ್ಷಣೆಯ ಅತ್ಯಂತ ಸರಳ ಮತ್ತು ಪರಿಣಾಮಕಾರಿ ಮಾರ್ಗ. ಮರಗಳು ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ, ವಾಯು ಮಾಲಿನ್ಯವನ್ನು ಕಡಿಮೆ ಮಾಡುತ್ತವೆ, ಮಣ್ಣಿನ ಸವೆತವನ್ನು ತಡೆಯುತ್ತವೆ ಮತ್ತು ಜೀವ ವೈವಿಧ್ಯಕ್ಕೆ ಆಶ್ರಯ ನೀಡುತ್ತವೆ. ನಮ್ಮ ಮನೆಗಳ ಸುತ್ತ, ಶಾಲಾ ಆವರಣಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಗಿಡಗಳನ್ನು ನೆಡುವುದರಿಂದ ನಮ್ಮ ಸುತ್ತಮುತ್ತಲಿನ ಪರಿಸರ ಹಸಿರಾಗುತ್ತದೆ, ಮನಸ್ಸಿಗೆ ನೆಮ್ಮದಿ ನೀಡುತ್ತದೆ.

**ಮಾಲಿನ್ಯ ಮುಕ್ತವಾಗಲಿ:** ಮಾಲಿನ್ಯವನ್ನು ನಿಯಂತ್ರಿಸುವುದು ನಮ್ಮೆಲ್ಲರ ಜವಾಬ್ದಾರಿ. ಇದಕ್ಕಾಗಿ ನಾವು ಪ್ರತಿದಿನವೂ ಮಾಡಬಹುದಾದ ಕೆಲವು ಸರಳ ಕಾರ್ಯಗಳು ಇಲ್ಲಿವೆ.

**ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ:** ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ, ಮರುಬಳಕೆ ಮಾಡಬಹುದಾದ ಬಟ್ಟೆಯ ಚೀಲಗಳು, ಸ್ಟೀಲ್ ಬಾಟಲಿಗಳನ್ನು ಬಳಸಿ.

**ತ್ಯಾಜ್ಯ ವಿಲೇವಾರಿ:** ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ವಿಲೇವಾರಿ ಮಾಡಿ. ಸಾವಯವ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿ ಸಬಹುದು.

**ನೀರಿನ ಸಂರಕ್ಷಣೆ:** ನೀರನ್ನು ಮಿತವಾಗಿ ಬಳಸಿ, ಸೋರಿಕೆಯನ್ನು ತಡೆಗಟ್ಟಿ. ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಉತ್ತಮ.

ಶಕ್ತಿ ಸಂರಕ್ಷಣೆ: ಅನಗತ್ಯವಾಗಿ ವಿದ್ಯುತ್ ದೀಪಗಳು ಮತ್ತು ಉಪಕರಣಗಳನ್ನು ಆಫ್ ಮಾಡಿ. ಸೌರಶಕ್ತಿ ಮತ್ತು ಪರ್ಯಾಯ ಇಂಧನ ಮೂಲಗಳನ್ನು ಬಳಸಲು ಪ್ರೋತ್ಸಾಹಿಸಿ.

**ವಾಹನಗಳಿಂದ ಮಾಲಿನ್ಯ ನಿಯಂತ್ರಣ:** ಸಾಧ್ಯ ವಾದಷ್ಟು ಸಾರ್ವಜನಿಕ ಸಾರಿಗೆಯನ್ನು ಬಳಸಿ, ಸೈಕಲ್ ಅಥವಾ ನಡೆದು ಹೋಗುವ ಅಭ್ಯಾಸ ಬೆಳೆಸಿಕೊಳ್ಳಿ.

**ಸಂಕಲ್ಪ ಮಾಡೋಣ:** ವಿಶ್ವ ಪರಿಸರ ದಿನ ಕೇವಲ ಒಂದು ದಿನದ ಆಚರಣೆಯಾಗಿರದೆ, ನಿರಂತರ ಜಾಗೃತಿ ಮತ್ತು ಕ್ರಿಯೆಯ ದಿನವಾಗಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆ ಕಾಳಜಿ ವಹಿಸಿದರೆ ಮಾತ್ರ ಆರೋಗ್ಯಕರ ಮತ್ತು ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ಸಾಧ್ಯ. ಬನ್ನಿ, ಈ ವಿಶ್ವ ಪರಿಸರ ದಿನದಂದು, ಪ್ರತಿದಿನವೂ ನಮ್ಮ ಭೂಮಿಯನ್ನು ಹಸಿರಾಗಿಸಲು ಮತ್ತು ಮಾಲಿನ್ಯ ಮುಕ್ತಗೊಳಿಸಲು ಸಂಕಲ್ಪ ಮಾಡೋಣ. ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸುವುದು ನಮ್ಮ ಆದ್ಯ ಕರ್ತವ್ಯ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಗಿಡಮರ ನಮ್ಮ ಬದುಕಿಗೆ ಜೀವದಾಯಿನಿಗಳು

## ಸಮೀಕ್ಷೆಗಳು ಹೇಳುತ್ತಿವೆ ಭಾರತ ದೇಶಕ್ಕೆ ಐದುನೂರು ಕೋಟಿ ಮರಗಳ ಅವಶ್ಯಕತೆ ಇದೆ

ಅದೊಂದು ಕಾಲವಿತ್ತು... ಹಳ್ಳಿಗಳಲ್ಲಿ ಚಿಕ್ಕಪುಟ್ಟ ಶಹರಗಳಲ್ಲಿ ಊರ ಹೊರಗಿನ ದೊಡ್ಡ ಆಲದ ಮರದ ಕೆಳಗೆ ಹಿರಿಯರಿಲ್ಲ ಸೇರಿ ಪಂಚಾಯಿತಿ ನಡೆಸುತ್ತಿದ್ದರು. ಊರಿಗೆ ಸಂಬಂಧಪಟ್ಟ ಎಲ್ಲ ಕೆಲಸಗಳ, ವಿಷಯಗಳ ನಿರ್ಣಯ ಅಲ್ಲಿಯೇ ಆಗುತ್ತಿತ್ತು .ಎಲ್ಲ ಘಟನೆಗಳಿಗೂ ಆ ಮರವೇ ಸಾಕ್ಷಿಯಾಗುತ್ತಿತ್ತು.



ಊರ ಮುಂದಣ ಬೇವಿನ ಮರಕ್ಕೆ ಕಟ್ಟಿದ ಜೋಕಾಲಿಯಲ್ಲಿ ಊರಿನ ಸರ್ವ ಜನರು ಯಾವುದೇ ರೀತಿಯ ಭೇದ ಭಾವಗಳಿಲ್ಲದೆ ಆಟವಾಡುತ್ತಿದ್ದರು. ಇನ್ನು ಊರಿಗೆ ಬರುವ ಯಾರೇ ಆಗಲಿ ಆ ಕಟ್ಟೆಗೆ ಬಂದು ಜನರೊಂದಿಗೆ ಸುಖ ದುಃಖ ಹಂಚಿಕೊಳ್ಳುತ್ತಿದ್ದರು. ಇದೀಗ ಆ ಪರಿಸರವೂ ಇಲ್ಲ ಆ ಜನರೂ ಇಲ್ಲ!.ಬೇಸಿಗೆಯಲ್ಲಿ ನೀರಿಲ್ಲ ಎಂದು ನಾವು ಪ್ರಜೆಗಳು ಬಡಬಡಿಸಿದರೆ ಸರ್ಕಾರ 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎಂಬಂತೆ ಅಲ್ಲಲ್ಲಿ ನೀರು ಪೂರೈಕೆಗೆ ಅನುಕೂಲ ಮಾಡಿಕೊಡುತ್ತದೆ. ಟ್ಯಾಂಕರ್ ಗಳಲ್ಲಿ ನೀರನ್ನು ತಂದು ಪೂರೈಸುತ್ತದೆ. ಇದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಆದರೂ ಕೂಡ ಜನ ಅನಿವಾರ್ಯವಾಗಿ ಸುಮ್ಮನಾಗಿಬಿಡುತ್ತಾರೆ. ಮುಂದೆ ಮಳೆ ಬಂದ ಕೂಡಲೇ ಬೇಸಿಗೆಯ ನೀರಿನ ಸಮಸ್ಯೆಗಳನ್ನು ಮರೆತುಬಿಡುತ್ತೇವೆ ಕೆರೆಕಟ್ಟೆಗಳನ್ನು ತುಂಬಿಸುವ ಮಳೆ ಮುಂದಿನ ಕೆಲ ತಿಂಗಳುಗಳ ಕಾಲ ಜನರನ್ನು ಶಾಂತವಾಗಿಸುತ್ತದೆ ಎನ್ನುವುದೇನೋ ಸರಿ ಮತ್ತೆ ಡಿಸೆಂಬರ್ ಸುಮಾರಿಗೆ ನೀರಿಲ್ಲದೆ ಕೆರೆಕಟ್ಟೆಗಳು ಒಣಗಿ ಬಾಯಿ ತೆರೆದು ನಿಲ್ಲುತ್ತವೆ ಮತ್ತೆ ಪತ್ರಿಕೆಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಇದೇ ಸುದ್ದಿ. ಪರಿಸ್ಥಿತಿ ಹೇಗಿದೆ ಎಂದರೆ ನಾವು ಗಡ್ಡಕ್ಕೆ ಬೆಂಕಿ ಹತ್ತಿದೆ ಎಂದಾಗ ಬಾವಿ ತೋಡುವಂತಹ ತಾತ್ಕಾಲಿಕ ಪರಿಹಾರಗಳನ್ನು ಮಾತ್ರ ಯೋಚಿಸುತ್ತಿದ್ದೇವೆ.

ಅಂದು ಪ್ರತಿ ಮನೆಗಳಲ್ಲೂ ಬಾವಿಗಳನ್ನು ಹೊಂದಿರುತ್ತಿದ್ದರು ಬಾವಿ ಇಲ್ಲದ ಮನೆಗೆ ಮಗಳನ್ನು ಕೊಡುತ್ತಿರಲಿಲ್ಲ. ಮನೆಯ ಹಿತ್ತಲ ಬಾವಿಯ ಬಳಿ ಇರುವ ಒಗೆಯುವ ಕಟ್ಟೆ ಹೆಣ್ಣು ಮಕ್ಕಳ ಹರಟೆಗೂ ಆಸರೆಯ ತಾಣವಾಗುತ್ತಿತ್ತು. ಮತ್ತೆ ಕೆಲ ಯುವತಿಯರಿಗೆ ಕನಸು ಕಾಣಲು ಕೂಡ! ಬಾವಿಯ ಕಟ್ಟೆಯ ಬಳಿ ಮನೆಯ ಪಾತ್ರೆ ಬಟ್ಟೆಗಳೆಲ್ಲ ಸ್ವಚ್ಛವಾಗುತ್ತಿದ್ದವು. ಮನೆಯ ಪುರುಷರು ಕೂಡ ಬಾವಿಯ ಕಟ್ಟೆಯ ಬಳಿಯೇ ಸ್ನಾನ ಇತ್ಯಾದಿಗಳನ್ನು ಪೂರೈಸಿಕೊಳ್ಳುತ್ತಿದ್ದರು.ಇನ್ನು ಪೂಜೆಗೆ ಬೇಕಾದ ಮಡಿ ನೀರಿಗೆ,ಅಡುಗೆಗೆ ಬೇಕಾದ ಸಿಹಿ ನೀರಿಗೆ ಬಾವಿಯ ನೀರೇ ಗತಿ. ಮನೆಯಲ್ಲಿ ಇರುವ ದನ ಕರುಗಳಿಗೆ ಕಲಗಚ್ಚನ್ನು ಕಲಸಲು, ಕೆಲಸದ ಆಳುಗಳಿಗೆ ಕೈ ಕಾಲು ತೊಳೆಯಲು ಕೂಡ ಬಾವಿಯ ನೀರು ಬೇಕೇ ಬೇಕು. ಒಂದೆರಡು ಮಳೆಗೆ ಭೂಮಿಯ ಅಂತರ್ಜಲ ಹೆಚ್ಚಿ ಬಾವಿಯಲ್ಲಿ ಸದಾಕಾಲ ನೀರಿರುತ್ತಿತ್ತು. ಬಹುತೇಕ ಮನೆಗಳಲ್ಲಿ ಬಾವಿಯ ನೀರು ಬದುಕಿನ ಆಧಾರ ಸ್ತಂಭವಾಗಿರುತ್ತಿತ್ತು. ಬದಲಾದ ಕಾಲಘಟ್ಟದಲ್ಲಿ ಇರುವ ಬಾವಿಗಳನ್ನು ಮುಚ್ಚಿ ಅದರ ಮೇಲೆ ಮನೆ ಕಟ್ಟುವ ಜನರನ್ನು ನಾವು ನೋಡುತ್ತಿದ್ದೇವೆ.

ಈ ಹಿಂದೆ ಕಾಡಿನಲ್ಲಿನ ಒಣಮರಗಳನ್ನು ಮಾತ್ರ ಕಡಿದು ಮಾರುತಿದ್ದರು ಆದರೆ ಇಂದು ಮಾನವನ ದುರಾಸೆಗೆ ಕಾಡಿಗೆ ಕಾಡೇ ಬಲಿಯಾಗುತ್ತಿದೆ. ಕೆಲವೇ ವರ್ಷದ ಇಂತಿಷ್ಟು ದಿನಗಳು ಕೆರೆಗಳ ಹಳ್ಳಗಳ ನೀರನ್ನು ಬಳಸುವುದು ನಿಶಿದ್ಧವೆಂದು ಕಾರಣ ಆ ಸಮಯದಲ್ಲಿಜಲಚರಗಳಸಂತಾನೋತ್ಪತ್ತಿಗೆಅನುಕೂಲವಾಗಲೆಂದು ಪ್ರಕೃತಿಯೊಂದಿಗೆ ಈ ರೀತಿಯ ಸಮನ್ವಯತೆಯನ್ನು ಮನುಷ್ಯ ಕಾಯ್ದು ಕೊಂಡಿದ್ದನು.

ಕೆಲವೆಡೆ ವರ್ಷದ ಇಂತಿಷ್ಟು ದಿನಗಳು ಕೆರೆಗಳ ಹಳ್ಳಗಳ ನೀರನ್ನು ಬಳಸುವುದು ನಿಷೇಧವಿತ್ತು ಕಾರಣ ಆ ಸಮಯದಲ್ಲಿ ಜಲಚರಗಳ ಸಂತಾನೋತ್ಪತ್ತಿ ಕ್ರಿಯೆ ಜರುಗುತ್ತಿತ್ತು ಪ್ರಕೃತಿಯೊಂದಿಗೆ ಈ ರೀತಿಯ ಸಮನ್ವತೆಯನ್ನು ಮನುಷ್ಯ ಕಾಯ್ದುಕೊಂಡಿದ್ದ.

ನಮ್ಮ ಬದುಕಿಗೆ ಮುಖ್ಯವಾದ ನೀರು, ಆಹಾರ, ನೆರಳು ನಮಗೆ ದೊರೆಯುವುದು ಪ್ರಕೃತಿಯಿಂದಲೇ. ನಾವು ನಡೆಯುವ ನೆಲ, ಕುಡಿಯುವ ಜಲ, ಉಸಿರಾಡುವ ಗಾಳಿ ಎಲ್ಲವೂ ಪ್ರಕೃತಿಯ ದೇಣಿಗೆ. ಹುಟ್ಟಿನಿಂದ ಸಾಯುವವರೆಗೂ ನಮ್ಮನ್ನು ಕೊರೆಯುವ ಈ ಪ್ರಕೃತಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಮತ್ತು ಅತ್ಯವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಮೊದಲೆಲ್ಲ ಕೆರೆ, ಬಾವಿಗಳಲ್ಲಿ ಸಿಗುತ್ತಿದ್ದ ನೀರು ಇಂದು ಕ್ಯಾನುಗಳಲ್ಲಿ ದೊರೆಯುತ್ತಿದೆ. ಕೆಲವೇ ದಿನಗಳಲ್ಲಿ ಲೋಟಗಳಲ್ಲಿ ಕಾಣುವುದು ಕೂಡ ಕಷ್ಟವೇನೋ? ಎಂಬ ಪರಿಸ್ಥಿತಿ.

ಅಂದು ಐವತ್ತರವತ್ತು ಅಡಿಗೆ ಬೋರ್ ಹಾಕಿದಾಗ ದೊರೆಯುವ ನೀರು ಎಂದು ಏಳೆಂಟು ನೂರು ಅಡಿ ಕೊರೆದರೂ ಅಂತರ್ಜಲ ಸಿಗುತ್ತಿಲ್ಲ . ನಗರೀಕರಣದ, ಅಭಿವೃದ್ಧಿಯ ನೆಪದಲ್ಲಿ ಎಲ್ಲೆಡೆ ಕಾಂಕ್ರೀಟ್ ರಸ್ತೆಗಳು ನಿರ್ಮಾಣವಾಗುತ್ತಿತ್ತು.ಮಳೆಯ ನೀರು, ಹರಿದು ಹೋಗಿ ಚರಂಡಿಯನ್ನು ಸೇರುತ್ತಿದೆ. ಮಳೆಯ ನೀರನ್ನು ಹಿಂಗಿಸಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲವಾಗಿ ಭೂಮಿಗೆ ಬೀಳುವ ಒಂದೆರಡು ಮಳೆಯಿಂದಲೇ ಮನುಷ್ಯರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುತ್ತಿದ್ದು ಮಳೆ ನೀರು ಕೊಯ್ಲು ಎಂಬ ಸರ್ಕಾರದ ಯೋಜನೆಯು ಕೇವಲ ಸರ್ಕಾರಿ ಕಡತಗಳಲ್ಲಿ ಮಾತ್ರ ಜೀವಂತವಾಗಿದೆ.

ವಿಪರೀತ ನೀರಿನ ಕೊರತೆಯಿಂದ ಒದ್ದಾಡಿದ ಸರ್ಕಾರ ಮತ್ತು ಜನಗಳು ಇದೀಗ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಕೆರೆಕಟ್ಟೆಗಳ ನಿರ್ಮಾಣವನ್ನು ಮಾಡಿದ್ದಾರೆ ಆದರೆ ಅವುಗಳ ಸೂಕ್ತ ನಿರ್ವಹಣೆ ಹೂಳು ನಿವಾರಣೆ ಮುಂತಾದ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದಾಗದೆ ನಿಗದಿತ ಪ್ರಮಾಣದ ನೀರು ಸಂಗ್ರಹವಾಗದೆ ಇರುವುದು ಕೂಡ ಪರಿಸ್ಥಿತಿಯ ಗಂಭೀರತೆ ಯನ್ನು ತೋರುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಕೇವಲ ಬೆಂಗಳೂರು ನಗರ ಒಂದರಲ್ಲಿಯೇ ನಗರೀಕರಣ ಮಾಡುವ ಭರದಲ್ಲಿ ಸಾವಿರಾರು ಕೆರೆಗಳನ್ನು ಮುಚ್ಚಲಾಗಿದ್ದು ಇದೀಗ ಕೇವಲ ಎರಡು ನೂರು ಕೆರೆಗಳು ಮಾತ್ರ ಇವೆ ಅವುಗಳಲ್ಲಿ 150 ಕೆರೆಗಳು ಮಾತ್ರ ಸುಸ್ಥಿತಿಯಲ್ಲಿವೆ. ಬೃಹತ್ ಬೆಂಗಳೂರು ನಗರದ ನೀರಿನ ಬವಣೆ ಯನ್ನು ತೀರಿಸಲು ಈ ಕೆರೆಗಳಿಂದ ಸಾಧ್ಯವಿಲ್ಲ ಅಂತೆಯೇ ಬೇರೆಯವರ ಪಾಲಿನ ನೀರನ್ನು ಕೂಡ ಬೆಂಗಳೂರು ಮಹಾನಗರಕ್ಕೆ ಹರಿಸಲಾಗುತ್ತಿದೆ. ದೀಪದ ಅಡಿಯಲ್ಲಿ ಕತ್ತಲು ಎಂಬಂತೆ ನದಿಗಳಿಗೆ ಅಡ್ಡಲಾಗಿ ಬ್ಯಾರೇಜುಗಳನ್ನು, ಜಲಾಶಯಗಳನ್ನು ಕಟ್ಟಲು ತಮ್ಮ ಹೊಲಗದ್ದೆಗಳನ್ನು ಕಳೆದುಕೊಂಡ ಜನರಿಗೆ ಕುಡಿಯುವ ನೀರು ದೊರೆಯದೆ ಇರುವುದು ಪರಿಸ್ಥಿತಿಯ ವಿಪರ್ಯಾಸತೆಯನ್ನು ತೋರುತ್ತದೆ.

ಸರ್ಕಾರ ಜನರ ವ್ಯವಸಾಯಕ್ಕೆ ಅನುಕೂಲವಾಗಲಿ ಎಂದು ರೈತರ ಹೊಲಗಳಲ್ಲಿ ಚೆಕ್ ಡ್ಯಾಮ್ ಗಳನ್ನು ಕಟ್ಟಿಸಲು ಸಹಾಯಧನ ನೀಡುತ್ತಿತ್ತು ಅಲ್ಲವೇ ಇಲ್ಲೂ ಕೂಡ ಭ್ರಷ್ಟಾಚಾರ ತಾಂಡವವಾಡುತ್ತಿದ್ದು ಸಹಾಯಧನ ಪಡೆದು ಕೃಷಿ ಹೊಂಡಗಳನ್ನು ಮಾಡಿಕೊಳ್ಳುವ ಜನರು ಅವುಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಬೇಕು ಅಲ್ಲವೇ?

ಬೇಸಿಗೆಯಲ್ಲಿ ಅಬ್ಬಬ್ಬಾ! ಅದೆಷ್ಟು ಬಿಸಿಲು ಎಂದು ನಾವು ಫ್ಯಾನ್ ಕೂಲರ್ ಮತ್ತು ಎಸಿಗಳ ಮೊರೆ ಹೋಗುತ್ತೇವೆ, ಹೊರತು ಒಂದೆರಡು ಗಿಡಗಳನ್ನು ನೆಟ್ಟು ಅವುಗಳ ಪಾಲನೆ ಪೋಷಣೆ ಮಾಡಿ ಅದರ ನೆರಳಿನಲ್ಲಿ ಧಗೆ ಆರಿಸಿಕೊಳ್ಳಲು ಕೊಡುವುದಿಲ್ಲ ಮನೆಯ ಸುತ್ತಲೂ ಗಿಡ ನೆಟ್ಟು ಪೋಷಿಸಲು ತೊಂದರೆಯನ್ನು ಹೇಳಿಕೊಳ್ಳುವ ತಾಯಂದಿರಿಗೆ ನೀರಿಗಿಂತ ಹೆಚ್ಚಿನ ತೊಂದರೆ ಇರುವುದು ಕಾಂಕ್ರೀಟ ಮಯವಾಗಿರುವ ತಮ್ಮ ಕಾಂಪೌಂಡ್ ನಲ್ಲಿ ಬೀಳುವ ಎಲೆಗಳ ಕಸದಿಂದ. ಪೂಜೆಗಾಗಿ ಬೇಕಾಗುವ ಒಂದೆರಡು ಗಿಡಗಳನ್ನು ಬೆಳೆಸುವ ಪರಿಪಾಠ ನಮ್ಮಲ್ಲಿ ಬೆಳೆದು ಬಂದಿದೆ ಎಂಬುದನ್ನು ಬಿಟ್ಟರೆ ಪರಿಸರದ ಉಳಿವಿಗಾಗಿ ನಾವೇನೂ ನೀಡುತ್ತಿಲ್ಲ.

ಪ್ರಸಕ್ತ ವರ್ಷದ ವರದಿಯಂತೆ ಈ ವರ್ಷದ ಬೇಸಿಗೆಯಲ್ಲಿ 48 ರಿಂದ 54ಲಿ ಸೆಂಟಿಗ್ರೇಡ್ ಉಷ್ಣತೆ ಹೆಚ್ಚಾಗಿದ್ದು ಜನರ ಆಹಾಕಾರ ಮುಗಿಲು ಮುಟ್ಟಿತ್ತು. ಆದರೆ ಸುದೀರ್ಘವಾದ ಸೈಕ್ಲೋನ್ಗಳು ಚಂಡಮಾರುತಗಳ ಪ್ರಭಾವದಿಂದಾಗಿ ಕಳೆದ ತಿಂಗಳು ಮಳೆ ತನ್ನ ಪ್ರಭಾವವನ್ನು ತೋರಿ ಇದೀಗ ದೇಶದ ಕೆಲ ಪ್ರಾಂತ್ಯಗಳಲ್ಲಿ ಸಾಕಷ್ಟು ಮಳೆಯಾಗಿದ್ದು ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ. ಹೀಗೆ ಪ್ರವಾಹ ಉಂಟಾಗಲು ಕಾರಣ ಕೂಡ ನಮ್ಮ ಅವೈಜ್ಞಾನಿಕ ರಸ್ತೆಯ ಮಾದರಿಗಳು ಡ್ರೈನೇಜ್ ನಿರ್ವಹಣೆ ಮತ್ತು ಮಳೆ ನೀರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೆ ಹರಿದು ಹೋಗಲು ಬಿಟ್ಟು ಬಿಡುತ್ತಿರುವ ರೀತಿ. ಮೊದಲಾದರೆ ಮಣ್ಣು ನೆಲ ನೀರನ್ನು ಹೀರಿಕೊಂಡು ಭೂಮಿಯ ಅಂತರ್ಜಲವನ್ನು ಹೆಚ್ಚಿಸುವಲ್ಲಿ ತನ್ನ ಕಾಣಿಕೆಯನ್ನು ನೀಡುತ್ತಿತ್ತು ಆದರೆ ಕಾಂಕ್ರೀಟ್ ಮಯವಾಗಿರುವ ರಸ್ತೆಗಳು ನೀರನ್ನು ಹೀರಿಕೊಳ್ಳುವುದಂತೂ ದೂರ. ಹೀಗಾಗಿ ಮಳೆಯ ನೀರು ಹರಿದು ಚರಂಡಿಯನ್ನು ಸೇರುತ್ತದೆ. ಮತ್ತೆ ನಾವು ನೀರಿಲ್ಲ ಎಂದು ಬಾಯಿ ಬಡೆದುಕೊಳ್ಳುತ್ತೇವೆ.

ಕೇವಲ ಮೂರು ದಶಕಗಳ ಹಿಂದೆ ಇದೇ ರೀತಿ ಮನುಷ್ಯ ಪ್ರಕೃತಿಯನ್ನು ನಾಶಗೊಳಿಸುತ್ತಾ ಹೋದರೆ ಮುಂದೆ ಭಯಂಕರ ಪರಿಣಾಮಗಳನ್ನು ಕಾಣಬಹುದು ಎಂದು ಜಾಗತಿಕ ಹವಾಮಾನ ಇಲಾಖೆಯ ತಜ್ಞರು ಮತ್ತು ಪರಿಸರ ತಜ್ಞರು ಎಚ್ಚರಿಕೆಯನ್ನು ನೀಡಿದ್ದಾರೆ. ಎಲ್ಲ ರೀತಿಯ ಎಚ್ಚರಿಕೆಗಳ ಹೊರತಾಗಿಯೂ ಮನುಷ್ಯನ ವಿಸ್ಮೃತಿಯ ಕಾರಣದಿಂದಾಗಿ ಆಗುತ್ತಿರುವ ಯಾವುದೇ ತೊಂದರೆಗಳು ನಮ್ಮದಲ್ಲ ಮತ್ತು ನಮದಲ್ಲ ಎಂಬ ಭಾವದಿಂದಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ.ಹಿಮ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ಸ್ಥಿತವಾಗಿರುವ ಬೃಹತ್ ಹಿಮದ ನೀರ್ಗಲ್ಲುಗಳು ಉಷ್ಣತೆಯಿಂದಾಗಿ ಕರಗಿ ಸಮುದ್ರವನ್ನು ಸೇರುತ್ತಿವೆ ಇದರಿಂದಾಗಿ ಭೂಮಿಯ ಮೇಲೆ ಪ್ರವಾಹ ಪರಿಸ್ಥಿತಿ ಏರ್ಪಡಬಹುದು ಎಂಬುದು ಪರಿಸರ ತಜ್ಞರ ಭಯ.

ಪರಿಸರಕ್ಕೆ ಮತ್ತಷ್ಟು ಹಾನಿಯಾಗುತ್ತಿರುವುದು ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ. ದಿನವೊಂದಕ್ಕೆ ಇಡೀ ಜಗತ್ತಿನಲ್ಲಿ 20 ಲಕ್ಷ ಟನ್ ಗಿಂತಲೂ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ ಎಂದರೆ ನಾವು ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಳ್ಳಬೇಕು. ಈ ಹಿಂದೆ ಅಮೆರಿಕಾದ ಒಂದು ಪ್ರಾಂತದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಹೂಳಿದ ಜಾಗದಲ್ಲಿ ವಾಸವಾಗಿದ್ದ ಜನರ ಮಕ್ಕಳ ಅನುವಂಶೀಯ ಬೆಳವಣಿಗೆಯಲ್ಲಿ ವ್ಯತ್ಯಾಸವಾಗಿದ್ದು ಇತ್ತೀಚಿಗೆ ಅಲ್ಲಿ ಹುಟ್ಟಿದ ಮಕ್ಕಳು ದೈಹಿಕ ನ್ಯೂನ್ಯತೆಗಳನ್ನು ಹೊಂದಿದ್ದಾರೆ ಈ ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡಿದಾಗ ಹೊರ ಬಿದ್ದ ಆಘಾತಕಾರಿ ವಿಷಯ ಪ್ಲಾಸ್ಟಿಕ್ ತ್ಯಾಜ್ಯದ ಕಾರಣದಿಂದಾಗಿ ಹೊರಹೊಮ್ಮುವ ವಿಷಕಾರಿ ಅನಿಲಗಳು ಆ ಭೂಮಿಯನ್ನು ಹಾಳುಗೆಡವಿದ್ದು ಇದು ಮಕ್ಕಳ ಪಾಲಕರ ವಂಶವಾಹಿಗಳ ಮೇಲೆ ಪರಿಣಾಮವನ್ನು ಬಿರಿದ್ದು ಇತ್ತೀಚಿಗೆ ಹುಟ್ಟಿದ ಮಕ್ಕಳು ನ್ಯೂನತೆಗಳನ್ನು ಹೊಂದಿರಲು ಕಾರಣವಾಗಿದೆ. ಮತ್ತೆ ಬೃಹತ್ ನಗರಗಳ ಕೆಲವೆಡೆಗಳಲ್ಲಿ ಬೃಹದಾಕಾರದ ಪ್ಲಾಸ್ಟಿಕ್ ತ್ಯಾಜ್ಯಗಳ ಬೆಟ್ಟಗಳು ಉಂಟಾಗಿದ್ದು ಅಲ್ಲಿ ಸಾಮಾನ್ಯವಾಗಿ ಪಕ್ಷಿಗಳು ತಮ್ಮ ಆಹಾರಕ್ಕಾಗಿ ಹಾರಾಡುತ್ತಿರುತ್ತವೆ. ಇಂತಹ ಪಕ್ಷಿಗಳ ಹಾರಾಟದಿಂದಾಗಿ ಅಲ್ಲಿ ಹಾರುವ ವಿಮಾನಗಳು ಅತಿ ವೇಗದಲ್ಲಿ ಹಾರುವ ಸಮಯದಲ್ಲಿ ಈ ಪಕ್ಷಿಗಳು ಅಡ್ಡ ಬರುವ ಕಾರಣ ಅಪಘಾತಗಳು ಉಂಟಾಗುವ ಸಾಧ್ಯತೆಗಳು ಕೂಡ ಇವೆ.

ಪರಿಸರ ಹಾನಿಗೆ ಸಾವಿರಾರು ಕಾರಣಗಳಿವೆ

ಆದರೆ ಅದನ್ನು ಉಳಿಸಿಕೊಳ್ಳಲು ನಾವು ಕೈಗೊಳ್ಳಬೇಕಾದ ಒಂದೇ ಒಂದು ಕಾರ್ಯವೆಂದರೆ ಗಿಡಗಳನ್ನು ನೆಟ್ಟು ಪೋಷಿಸುವುದು ತನ್ನ ಮೂಲಕ ಜೀವ ವೈವಿಧ್ಯಗಳ ರಕ್ಷಣೆ ಮಾಡುವುದು.

ಪರಿಸರ ರಕ್ಷಣೆಗೆ ಸರಪಳಿ ಕ್ರಿಯೆಯ ಮೊದಲ ಕೊಂಡಿ ನಾವಾಗಬೇಕು ವರ್ಷಕ್ಕೊಮ್ಮೆ ಕೇವಲ ಒಂದು ಗಿಡವನ್ನು ನೂರು ಜನ ಸೇರಿ ನೆಟ್ಟು ಫೋಟೋ ತೆಗೆಸಿಕೊಂಡು ಪೇಪರುಗಳಲ್ಲಿ ಹಾಕುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸುವ ಬದಲಾಗಿ ನಮ್ಮ ನಮ್ಮ ಮನೆಯಂಗಳದಲ್ಲಿ ಕುಟುಂಬದ ಸದಸ್ಯರಷ್ಟೇ ಸಂಖ್ಯೆಯ ಗಿಡಗಳನ್ನು ಪ್ರತಿ ವರ್ಷವೂ ನೆಡಬೇಕು. ಮನೆಯಲ್ಲಿ ಸಾಧ್ಯವಾಗದಿದ್ದರೆ ರಸ್ತೆಯ ಇಕ್ಕೆಲಗಳಲ್ಲಿ ನೆಡಬಹುದು. ನಮ್ಮ ಸುತ್ತಲಿನ ಪರಿಸರವನ್ನು ಸಾಧ್ಯವಾದಷ್ಟು ಚೊಕ್ಕಟವಾಗಿ ಇಟ್ಟುಕೊಳ್ಳಬೇಕು. ಹೆಚ್ಚು ಹೆಚ್ಚು ಗಿಡಮರಗಳು ಇದ್ದರೆ ಅತಿಯಾದ ವಾಹನ ದಟ್ಟಣೆಯಿಂದ ಉಂಟಾಗುವ ಇಂಗಾಲದ ಪ್ರಮಾಣವನ್ನು ಗಿಡ ಮರಗಳು ಹೀರಿಕೊಳ್ಳುವ ಮೂಲಕ ಅಪಾಯವನ್ನು ಕಡಿಮೆ ಮಾಡಬಹುದು.

ಸಾಮುದಾಯಿಕ ಆಸ್ತಿಗಳೆಂದು ಪರಿಗಣಿಸಿ ನಮ್ಮ ನೀರಿನ ಮೂಲಗಳನ್ನು ಸಂರಕ್ಷಿಸಬೇಕು. ನಮ್ಮ ಮನೆಯ ಸುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಜೊತೆ ಜೊತೆಗೆ ನೀರಿನ ಮೂಲಗಳಾದ ಕೆರೆ,ಕಟ್ಟೆ,ನದಿಗಳಲ್ಲಿ ಪೂಜೆಯ ನೈರ್ಮಾಲ್ಯಗಳನ್ನು ಎಸೆಯದೆ ಕಾರ್ಖಾನೆಯ ರಾಸಾಯನಿಕಗಳನ್ನು ಎಸೆಯದೆ ಇರುವಂತೆ ಕ್ರಮಗಳನ್ನು ಕೈಗೊಳ್ಳಬೇಕು.

ರೆಡ್ಯೂಸ್, ರಿ ಯೂಸ್ ಮತ್ತು ರಿಸೈಕಲ್ ಎಂಬ ಮೂರು ಪದಗಳನ್ನು ನಮ್ಮ ದೈನಂದಿನ ಬದುಕಿನ ಮಂತ್ರಗಳಾಗಿಸಬೇಕು.

ಅತಿಯಾಗಿ ಸಂಪನ್ಮೂಲಗಳನ್ನು ಪೋಲು ಮಾಡದೆ ಎಷ್ಟು ಬೇಕೋ ಅಷ್ಟೇ ಬಳಕೆ ಮಾಡುವ ಮೂಲಕ ನಮ್ಮ ಬಳಕೆಯನ್ನು ಕಡಿಮೆಗೊಳಿಸಬೇಕು (ರೆಡ್ಯೂಸ್) ಅಂದರೆ ಪುನರ್ ಬಳಕೆ ಮಾಡಿಕೊಳ್ಳಲು ಸಾಧ್ಯವಾಗುವ ಎಲ್ಲ ವಸ್ತುಗಳನ್ನು ಮರುಬಳಕೆ (ರಿ ಯೂಸ್) ಮಾಡಿಕೊಳ್ಳುವುದರಲ್ಲಿ ತಪ್ಪಿಲ್ಲ. ಮುಖ್ಯವಾಗಿ ಬಳಸಿ ಬಿಸಾಡುವ ವಸ್ತುಗಳ ಬಳಕೆಯನ್ನು ಕಡಿಮೆಗೊಳಿಸಬೇಕು. ಪರಿಸರದಲ್ಲಿ ವಿಲೀನಗೊಳ್ಳುವ ಕರಗಿ ಹೋಗುವ ವಸ್ತುಗಳ ಬಳಕೆ ಹೆಚ್ಚಾಗಬೇಕು. ಮೂರನೆಯದಾಗಿ ರೀ ಸೈಕಲ್ ಅಂದರೆ ಕೆಲವು ಸಂಪನ್ಮೂಲಗಳನ್ನು ಮತ್ತೆ ಪುನರುಪಿಸಿ ಬಳಸಲು ಅನುವು ಮಾಡಿಕೊಳ್ಳಬೇಕು ಈ ರೀತಿ ಮಾಡುವ ಮೂಲಕ ನಾವು ನಮ್ಮ ಮೂಲಭೂತ ಸವಲತ್ತುಗಳ ಉಳಿಸಿಕೊಳ್ಳಬೇಕು.

ಪರಿಸರಕ್ಕೆ ಹಾನಿಯಾಗುವ ವಸ್ತುಗಳ ಬಳಕೆಯನ್ನು ಅತ್ಯಂತ ಕಡಿಮೆ ಪ್ರಮಾಣಕ್ಕೆ ಇಳಿಸಬೇಕು ಸಾಧ್ಯವಾದಷ್ಟು ವಸ್ತುಗಳನ್ನು ಪುನರ್ ಬಳಕೆ ಮಾಡಬೇಕು ಮತ್ತು ಪುನರ್ಬಳಕೆ ಸಾಧ್ಯವಾಗುವ ವಸ್ತುಗಳನ್ನು ಹೆಚ್ಚು ಬಳಸಬೇಕು ತನ್ಮೂಲಕ ನಮ್ಮ ಗ್ರಾಮವನ್ನು ನಮ್ಮ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಮುಂದೆ ಪರಿಸ್ಥಿತಿ ಗಂಭೀರವಾಗದಿರಲು ಭಾರತ ದೇಶಕ್ಕೆ ಐದು ನೂರು ಕೋಟಿ ಮರಗಳ ಅವಶ್ಯಕತೆ ಇದೆ ಎಂದು ಸಮೀಕ್ಷೆಗಳು ತಿಳಿಸುತ್ತವೆ. ಗಿಡಮರಗಳು ನಮ್ಮ ಬದುಕಿಗೆ ಜೀವದಾಯಿನಿಗಳು ಎಂಬುದನ್ನು ಅರಿತು ಪ್ರತಿ ಮನೆಯ ಮುಂದೆ ಒಂದು ಪುಟ್ಟ ತೋಟವನ್ನು ಮಾಡಿಕೊಂಡು ಗಿಡಮರಗಳನ್ನು ಬೆಳೆಸಿ ಪರಿಸರವನ್ನು ನಮ್ಮ ಕೈಲಾದಷ್ಟು ಉಳಿಸಿ ಬೆಳೆಸೋಣ. ಎಲ್ಲರಿಗೂ ವಿಶ್ವ ಪರಿಸರ ದಿನಾಚರಣೆಯ ಶುಭಾಶಯಗಳು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪರಿಸರ-ಪರವಾರ

ಪಸರಿಸದಿದ್ದರೆ ಪಚ್ಚ ಪರಿಸರ
ಪಸಂದಿರದು ಪ್ರಪಂಚ ಪರಿವಾರ
ಪರಿಚ್ಛೇದಿಸಿದರೆ ಪರಶುವಿನಿಂದ ಪರಿಸರ
ಪರದಾಟ, ಪಡಿಪಾಟಲಕ್ಕಿಲ್ಲ ಪರಿಹಾರ

ಪರಿಸರವಿದ್ದರೆ ಪೂರ್ತಿ ಪ್ರಗತಿ
ಪರಿಸರವಿರದಿದ್ದರೆ ಪೇಚು ಫಜೀತಿ
ಪರಿಗಣಿಸದಿದ್ದರೆ ಪರಿಸರ ಪರುವ
ಪರಿಜನವಾಗುವವರು ಪೇಲವ

ಪರಿಸರದಿ ಪ್ರಾರಂಭಿಸಿದರೆ ಪ್ರಹಾರ
ಪ್ರಾಪ್ತಿಯಾಗದು ಪೂರ ಪಳಾರ
ಪ್ರಸರಣವಾದರೆ ಪರಿಸರ ಪ್ರಕೋಪ
ಪ್ರತಿಜನ ಪಡುವರು ಪ್ರತಿದಿನ ಪರಿತಾಪ

ಪರಿಸಮಾಪ್ತಿಸಲಿ ಪರಿಚ್ಛಿನ್ನದ ಪ್ರಲೋಭನೆ
ಪ್ರವತ9ನೆಯಾಗಲಿ ಪರಿಸರದ ಪ್ರವಧ9ನೆ
ಪರಿಕರಿಸಿದರೆ ಪೊರೆಯಲು ಪರಿಸರ
ಪರಮಾನಂದ ಪಡೆಯುವುದು ಪರಿಕರ

ಪರಿಸರ ಪರಮಾತ್ಮ ಪ್ರಾಪ್ತಿಸಿದ ಪನಿವಾರ
ಪ್ರತಿ ಪಥಕ್ಕೂ ಪರಿಸರವೇ ಪ್ರಧಾನಾಧಾರ
ಪರಿಪಾಠವಾಗಲಿ ಪರಿಸರ ಪರಿಪಾಲನ
ಪಡೆಯೋಣ ಪಕ್ವ ಪರಿಸರದ ಪ್ರಯೋಜನ.

– ಎಸ್.ಎಚ್.ಸೋಮಶೇಖರ
ಶಿಕ್ಷಕರು ಮಾಗಳ.

### ಕಾಡು ಬೆಳಸಿ ನಾಡು ಉಳಿಸಿ

ಹಸಿರೇ ಉಸಿರು ಉಸಿರೇ ಹೆಸರು
ಮಳೆಯಿಂದ ಬೆಳೆ, ಬೆಳೆಯಿಂದ ಪೈರು
ಪ್ರಕೃತಿಯ ಮಡಿಲಲಿ ನಿತ್ಯ ಹಸಿರ ತೇರು
ಬಾನೆತ್ತರೆಕ್ಕೆ ಬೆಳೆಸಿ ಅಮೃತದ ಕಲ್ಪತರು

ಸುಂದರ ಪ್ರಕೃತಿಯು ಮನಸನು
ಸೆಳೆಯುವುದು
ಭಗವಂತ ನೀಡಿದ ನಿಸರ್ಗ ಧಾಮವಿದು
ಎಷ್ಟು ಇಂಪು ಮುಂಜಾನೆ ಕೋಗಿಲೆ
ಕೂಗುವುದು
ಮಯೂರಿಯ ನೃತ್ಯ ನೋಡಲು ಎರಡು
ಕಣ್ಣು ಸಾಲದು

ಕಾಡು ಬೆಳಸಿ ನಾಡು ಉಳಿಸಿ
ಮರ ಗಿಡ ಕಡಿಯುವ ಕ್ರೂರತನ ನಿಲ್ಲಿಸಿ
ಕಾಡು ಪ್ರಾಣಿಯ ಬೇಟೆಯ ಅಳಿಸಿ
ಗುಡಿಸಲು ಕಟ್ಟಿ ಕಾಡಲ್ಲಿ ನೆಮ್ಮದಿ
ಅನುಭವಿಸಿ

ಜೀವ ಉಳಿಸುವ ಪ್ರಾಣ ವಾಯುವಿದೆ
ರೋಗಗಳಿಗೆ ರಾಮಬಾಣದ ಗ್ಯಾರಂಟಿ
ಔಷಧವಿದೆ
ಕವಿ ಸಾಹಿತಿಗಳಿಗೆ ನೆಮ್ಮದಿಯ ತಾಣವಿದೆ
ಗಡ್ಡೆ ಗೆಣಸುಗಳ ಸಿಹಿಯಾದ ಫಲವಿದೆ


ಹಸಿರೇ ಉಸಿರಾಗಲಿ ಸದಾ ನಿತ್ಯ ನೂತನ
ಮರಗಳ ನೆಟ್ಟು ಪರಿಸರ ಉಳಿಸಿ ಬದುಕು
ಪಾವನ
ಸಂರಕ್ಷಿಸಿ ಅನುದಿನ ಹಚ್ಚ ಹಸಿರಿನ
ಪ್ರಕೃತಿಯನ
ಪ್ರಕೃತಿ ಇರದಿದ್ದರೆ ನಮ್ಮ ಬದುಕೇ ಶೂನ್ಯ
ಜೋಪಾನ

ನಿಲ್ಲಿಸು ಮಾನವ ನಿನ್ನ ಕ್ರೂರತನ
ನಮ್ಮಂತೆ ಉಳಿಯಲಿ ಕಾಡು ಪ್ರಾಣಿಗಳ
ಸಂತಾನ
ತಿಳಿ ಸಾಲುಮರದ ತಿಮ್ಮಕ್ಕಳ ದಿಟ್ಟತನ
ಅಂದಾಗ ಪರಮಾತ್ಮನೂ ಕೂಡ
ಮೆಚ್ಚುತ್ತಾನ

– ಮುತ್ತು ಯ.ವಡ್ಡರ, ಶಿಕ್ಷಕರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಆನಂದ ಬಾಣ




# ಕೊಟ್ಟೂರೇಶ್ವರ ದೇಗುಲಕ್ಕೆ ಬೆಳ್ಳಿ ಬಾಗಿಲು

## ಬಾಗಿಲು ರಚನೆಗೆ ಬೆಳ್ಳಿಗಟ್ಟಿಗೆ ಪೂಜೆ ನಂತರ ಹಸ್ತಾಂತರ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನಕ್ಕೆ ಬೆಳ್ಳಿ ಬಾಗಿಲು ನಿರ್ಮಾಣ ಕಾಮಗಾರಿ ಕೈಗೊಳ್ಳಲು ಗುತ್ತಿಗೆದಾರರಿಗೆ ಧಾರ್ಮಿಕ ಇಲಾಖೆ ಅಧಿಕಾರಿಗಳು ಬೆಳ್ಳಿ ಗಟ್ಟಿಗಳನ್ನು ಸೋಮವಾರ ಪ್ರಮುಖರ ಸಮ್ಮುಖದಲ್ಲಿ ಹಸ್ತಾಂತರಿಸಿದರು.

ಈ ಮೊದಲು ಇದ್ದ ಹಿತ್ತಾಳೆ ಬಾಗಿಲಿಗೆ ಬದಲಾಗಿ ಬೆಳ್ಳಿ ಬಾಗಿಲು ಅಳವಡಿಸಲು ಇಲಾಖೆ ನಿರ್ಧರಿ ಸಿತ್ತು. ಅದರಂತೆ ಹಳೆಯ ಕಟ್ಟಿಗೆ ಬಾಗಿಲು ತೆಗೆದು, ತೇಗದ ಬಾಗಿಲು ಕದಗಳನ್ನು ನಿರ್ಮಿಸಲಾಗಿತ್ತು. ಇದೀಗ ಅದಕ್ಕೆ ಬೆಳ್ಳಿ ಕವಚ ಅಳವಡಿಸಲು 128.35 ಕೆಜಿ ಬೆಳ್ಳಿಯನ್ನು ಇಲಾಖೆಯವರು 1 ಕೋಟಿ 3 ಸಾವಿರ ರೂ.ಗಳಿಗೆ ಖರೀದಿಸಿ ಬ್ಯಾಂಕ್ ಲಾಕರ್‌ನಲ್ಲಿರಿಸಿದ್ದರು.

ಬೆಳ್ಳಿ ಕುಸುರಿ ಕೆಲಸ ಕೈಗೊಳ್ಳಲು ಕಾಮಗಾರಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರ ಬೆಂಗಳೂರಿನ ದೊರೆಬಾಬು ಅವರಿಗೆ, ದೇವಸ್ಥಾನದಲ್ಲಿ ಬೆಳ್ಳಿ ಗಟ್ಟಿಗೆಗಳಿಗೆ ಪೂಜೆ ನೆರವೇರಿಸಿ ಹಸ್ತಾಂತರಿಸಿದರು. ಬೆಂಗಳೂರಿನಲ್ಲಿ ಗಟ್ಟಿಗಳನ್ನು ಪ್ಲೇಟ್‌ಗಳನ್ನಾಗಿಸಿ ಕುಸುರಿ ಕೆಲಸ ಮಾಡಲು ಗುತ್ತಿಗೆದಾರರು ತೆಗೆದುಕೊಂಡು ಹೋದರು. ಬೆಳ್ಳಿ ಕೆಲಸವನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸಮಯ ನಿಗದಿಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ದೇವಸ್ಥಾನದ ಇಒ ಹನುಮಂತಪ್ಪ, ಧರ್ಮಕರ್ತ ಶೇಖರಯ್ಯ, ಜಿಪಂ ಮಾಜಿ ಸದಸ್ಯ ಎಂಎಂಜೆ ಹರ್ಷವರ್ಧನ, ಜಿಪಂ ಮಾಜಿ ಉಪಾಧ್ಯಕ್ಷ ಪಿಎಚ್ ದೊಡ್ಡರಾಮಣ್ಣ, ಮುಖಂಡ ಅಜ್ಜನಗೌಡ, ಡಿಶ್ ಮಂಜುನಾಥ, ಗುರುಸಿದ್ದನಗೌಡ, ಮಲ್ಲಿಕಾರ್ಜುನ ಸೇರಿ ಹಲವರು ಇದ್ದರು.

# ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ವೀರಶೈವ ಲಿಂಗಾಯತ ಜಾತಿ ಹಾಗೂ ಉಪಜಾತಿಗೆ ಸೇರಿದ ಸಮುದಾಯದ ಜನರ(ಪ್ರವರ್ಗ-IIIಬಿ) ಅಭಿವೃದ್ಧಿಗಾಗಿ 2025-26ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಮದಿಂದ ಶೈಕ್ಷಣಿಕ ಸಾಲ ಯೋಜನೆ (ಬಸವ ಬೆಳಗು ಯೋಜನೆ (ಹೊಸ ವಿದ್ಯಾರ್ಥಿಗಳು ಮತ್ತು ನವೀಕರಣ), ವಿದೇಶ ವಿದ್ಯಾವಿಕಾಸ ಯೋಜನೆ), ಜೀವಜಲ ಯೋಜನೆ, ಕಾಯಕ ಕಿರಣ ಯೋಜನೆ, ಭೋಜನಾಲಯ ಕೇಂದ್ರ, ವಿಭೂತಿ ನಿರ್ಮಾಣ ಘಟಕ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ (http://www.kaushalkar.com), ಸ್ವ ಸಹಾಯ ಸಂಘಗಳಿಗೆ ಉತ್ತೇಜನ ಯೋಜನೆಯಲ್ಲಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಅರ್ಹ ಫಲಾನುಭವಿಗಳು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಜೂನ್ 30 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್‌ಕಾರ್ಡಿನಲ್ಲಿರುವಂತೆಹೆಸರು(ಶ್ರೀ/ಶ್ರೀಮತಿ/ಕುಮಾರಿ ಮುಂತಾದ ಮಾಹಿತಿಯನ್ನು ಒಳಗೊಂಡಂತೆ) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಪುಸ್ತಕದಲ್ಲಿ ಹೊಂದಾಣಿಕೆಯಾಗಬೇಕು. ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ನಿಗಮದ ವೆಬ್‌ಸೈಟ್ https://kvldcl.karnataka.gov.in ಗೆ ಭೇಟಿ ನೀಡಿ ಅರ್ಹತೆ, ಮಾನದಂಡಗಳ ಕುರಿತು ಹೆಚ್ಚಿನ ಮಾಹಿತಿ ಪಡೆಯಬಹುದು ಅಥವಾ ನಿಗಮದ ಸಹಾಯವಾಣಿ ಸಂ: 080-22865522 ಮತ್ತು 9900012351, 9900012352 ಆಯಾ ಜಿಲ್ಲಾ ಕಚೇರಿಯ ದೂ.ಸಂ. 08539-221847 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾವು ಏಕೆ ಮುಖ್ಯ?

ವಾಟ್ಸಪ್ ವೈರಲ್

ಸಾವು ಎಂದರೆ ಎಲ್ಲರಿಗೂ ಭಯ. ಆದರೆ ಹುಟ್ಟು ಮತ್ತು ಸಾವು ಸೃಷ್ಟಿಯ ನಿಯಮಗಳು. ಇವು ಬ್ರಹ್ಮಾಂಡದ ಸಮತೋಲನಕ್ಕೆ ಬಹಳ ಮುಖ್ಯ. ಸಾವು ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಈ ಕಥೆ ಒಂದು ಉತ್ತಮ ಉದಾಹರಣೆ.

ಒಮ್ಮೆ ಒಬ್ಬ ರಾಜನು ತನ್ನ ರಾಜ್ಯದ ಹೊರಗೆ ಮರದ ಕೆಳಗೆ ಕುಳಿತಿದ್ದ ಋಷಿಯ ಬಳಿ ಹೋದ. "ಸ್ವಾಮಿ! ಅಮರತ್ವ ನೀಡುವ ಯಾವುದೇ ಮೂಲಿಕೆ ಅಥವಾ ಔಷಧಿ ಇದೆಯೇ? ದಯವಿಟ್ಟು ಹೇಳಿ" ಎಂದು ಕೇಳಿದ.

ಋಷಿ, "ಓ ರಾಜ! ನಿನ್ನ ಮುಂದೆ ಕಾಣುವ ಎರಡು ಪರ್ವತಗಳನ್ನು ದಾಟಿ ಹೋಗು. ಅಲ್ಲಿ ಒಂದು ಸರೋವರವಿದೆ. ಅದರ ನೀರನ್ನು ಕುಡಿದರೆ ನೀನು ಅಮರನಾಗುವೆ" ಎಂದರು.

ರಾಜನು ಎರಡು ಪರ್ವತಗಳನ್ನು ದಾಟಿ ಸರೋವರವನ್ನು ತಲುಪಿದ. ನೀರು ಕುಡಿಯಲು ಹೋಗುತ್ತಿದ್ದಾಗ, ನೋವಿನಿಂದ ನರಳುತ್ತಿದ್ದ ಒಬ್ಬ ದುರ್ಬಲ ವ್ಯಕ್ತಿಯ ಧ್ವನಿ ಕೇಳಿಸಿತು. ಧ್ವನಿ ಬಂದ ಕಡೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ನೋವಿನಿಂದ ಮಲಗಿದ್ದನು.

ರಾಜನು ಕಾರಣ ಕೇಳಿದಾಗ, ಆ ವ್ಯಕ್ತಿ, "ನಾನು ಈ ಸರೋವರದ ನೀರನ್ನು ಕುಡಿದು ಅಮರನಾದೆ. ನನಗೆ ನೂರು ವರ್ಷ ತುಂಬಿದಾಗ, ನನ್ನ ಮಗ ನನ್ನನ್ನು ಮನೆಯಿಂದ ಹೊರಹಾಕಿದ. ನಾನು ಕಳೆದ ಐವತ್ತು ವರ್ಷಗಳಿಂದ ಇಲ್ಲಿ ಮಲಗಿದ್ದೇನೆ, ನನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲ. ನನ್ನ ಮಗ ತೀರಿಹೋಗಿದ್ದಾನೆ, ಮತ್ತು ನನ್ನ ಮೊಮ್ಮಕ್ಕಳು ಈಗ ವೃದ್ಧರಾಗಿದ್ದಾರೆ. ನಾನು ತಿನ್ನುವುದು, ಕುಡಿಯುವುದನ್ನು ನಿಲ್ಲಿಸಿದ್ದೇನೆ, ಆದರೂ ನಾನು ಇನ್ನೂ ಬದುಕಿದ್ದೇನೆ" ಎಂದು ಹೇಳಿದ.

ರಾಜನು ಆಲೋಚಿಸಿದ, "ವೃದ್ಧಾಪ್ಯದೊಂದಿಗೆ ಅಮರತ್ವದಿಂದ ಏನು ಪ್ರಯೋಜನ? ನಾನು ಯೌವನದ ಜೊತೆಗೆ ಅಮರತ್ವವನ್ನು ಪಡೆದರೆ ಹೇಗೆ?" ಅವನು ಪರಿಹಾರಕ್ಕಾಗಿ ಋಷಿಯ ಬಳಿಗೆ ಹಿಂತಿರುಗಿ, "ದಯವಿಟ್ಟು ಅಮರತ್ವ ಮತ್ತು ಯೌವನ ಎರಡನ್ನೂ ಹೇಗೆ ಪಡೆಯುವುದು ಎಂದು ಹೇಳಿ" ಎಂದು ಕೇಳಿದ.

ಋಷಿ, "ಸರೋವರವನ್ನು ದಾಟಿದ ನಂತರ, ಇನ್ನೊಂದು ಪರ್ವತ ಸಿಗುತ್ತದೆ. ಅದನ್ನು ದಾಟಿ, ಹಳದಿ ಹಣ್ಣುಗಳಿಂದ ತುಂಬಿದ ಮರವೊಂದನ್ನು ಕಾಣುವೆ. ಅದರಲ್ಲಿ ಒಂದನ್ನು ತಿಂದರೆ, ನಿನಗೆ ಅಮರತ್ವ ಮತ್ತು ಯೌವನ ಎರಡೂ ಸಿಗುತ್ತವೆ" ಎಂದರು.



ರಾಜನು ಇನ್ನೊಂದು ಪರ್ವತವನ್ನು ದಾಟಿ, ಹಳದಿ ಹಣ್ಣುಗಳಿಂದ ತುಂಬಿದ ಮರವನ್ನು ಕಂಡನು. ಒಂದು ಹಣ್ಣನ್ನು ಕಿತ್ತು ತಿನ್ನಲು ಹೋಗುತ್ತಿದ್ದಾಗ, ಜೋರಾದ ವಾದ ಮತ್ತು ಜಗಳ ಕೇಳಿಸಿತು. ಇಷ್ಟು ದೂರದಲ್ಲಿ ಯಾರು ಜಗಳವಾಡುತ್ತಿರಬಹುದು ಎಂದು ರಾಜನಿಗೆ ಆಶ್ಚರ್ಯವಾಯಿತು.

ಅವನು ನಾಲ್ಕು ಯುವಕರು ಜೋರಾಗಿ ವಾದ ಮಾಡುತ್ತಿರುವುದನ್ನು ಕಂಡನು. ರಾಜನು ಯಾಕೆ ಜಗಳವಾಡುತ್ತಿದ್ದೀರಿ ಎಂದು ಕೇಳಿದ. ಅವರಲ್ಲಿ ಒಬ್ಬನು, "ನನಗೆ 250 ವರ್ಷ, ಮತ್ತು ನನ್ನ ಬಲಭಾಗದಲ್ಲಿರುವವನಿಗೆ 300 ವರ್ಷ. ಅವನು ನನ್ನ ಆಸ್ತಿಯ ಪಾಲನ್ನು ನನಗೆ ಕೊಡುತ್ತಿಲ್ಲ" ಎಂದು ಹೇಳಿದ.

ರಾಜನು ಬಲಭಾಗದಲ್ಲಿದ್ದ ವ್ಯಕ್ತಿಯನ್ನು ಕೇಳಿದಾಗ, "ನನ್ನ ತಂದೆ, ಅವರಿಗೆ 350 ವರ್ಷ. ಅವರು ಇನ್ನೂ ಬದುಕಿದ್ದಾರೆ ಮತ್ತು ನನಗೆ ನನ್ನ ಪಾಲನ್ನು ಕೊಟ್ಟಿಲ್ಲ. ನಾನು ಹೇಗೆ ನನ್ನ ಮಗನಿಗೆ ಕೊಡಲಿ?" ಎಂದನು.

ಆ ವ್ಯಕ್ತಿ ತನ್ನ 400 ವರ್ಷದ ತಂದೆಯನ್ನು ತೋರಿಸಿದ, ಅವರೂ ಅದೇ ದೂರು ಹೇಳಿದ. ಅವರೆಲ್ಲರೂ ರಾಜನಿಗೆ ತಮ್ಮ ಆಸ್ತಿಗಾಗಿ ನಡೆಯುವ ಈ ಅಂತ್ಯವಿಲ್ಲದ ಜಗಳದಿಂದಾಗಿ ಗ್ರಾಮಸ್ಥರು ತಮ್ಮನ್ನು ಹಳ್ಳಿಯಿಂದ ಹೊರಹಾಕಿದ್ದಾರೆ ಎಂದು ಹೇಳಿದರು.

ಆಘಾತಕ್ಕೊಳಗಾದ ರಾಜನು ಋಷಿಯ ಬಳಿಗೆ ಹಿಂದಿರುಗಿ, "ಸಾವಿನ ಮಹತ್ವವನ್ನು ನನಗೆ ಕಲಿಸಿದ್ದಕ್ಕಾಗಿ ಧನ್ಯವಾದಗಳು" ಎಂದನು.

ಆಗ ಋಷಿ ಹೇಳಿದರು, "ಸಾವು ಅಸ್ತಿತ್ವದಲ್ಲಿರುವುದರಿಂದಲೇ, ಜಗತ್ತಿನಲ್ಲಿ ಪ್ರೀತಿ ಇದೆ."

"ಸಾವನ್ನು ತಪ್ಪಿಸಲು ಪ್ರಯತ್ನಿಸುವ ಬದಲು, ಪ್ರತಿ ದಿನ ಮತ್ತು ಪ್ರತಿ ಕ್ಷಣವನ್ನು ಸಂತೋಷದಿಂದ ಬದುಕಿ. ನಿಮ್ಮನ್ನು ಬದಲಾಯಿಸಿಕೊಳ್ಳಿ, ಜಗತ್ತು ಬದಲಾಗುತ್ತದೆ."

ಇದರಿಂದ ನೀವು ಜೀವನದ ಪ್ರತಿಯೊಂದು ಕ್ಷಣವನ್ನೂ ಅರ್ಥಪೂರ್ಣವಾಗಿ ಹೇಗೆ ಬದುಕಬಹುದು ಎಂಬುದನ್ನು ಕಲಿಯಬಹುದು: ಜ್ಞಾನದಿಂದ ಬದುಕಿ, ಚೆನ್ನಾಗಿ ಬದುಕಿ. ಉತ್ತಮ ಜೀವನ ನಿಮ್ಮದಾಗಲಿ.

# ರೋಗ ನಿಯಂತ್ರಣಕ್ಕೆ ಸ್ವಚ್ಛತೆ ಕಾಪಾಡಿ

## ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ:**

ಸಾರ್ವಜನಿಕರು ಡೆಂಗ್ಯೂ, ಚಿಕನ್‌ಗುನ್ಯ ಹಾಗೂ ಮಲೇರಿಯಾ ರೋಗಗಳು ಹರಡದಂತೆ ಅಗತ್ಯ ಮುಂಜಾಗೃತಾ ಕ್ರಮ ವಹಿಸುವ ಮೂಲಕ ರೋಗಗಳು ಹರಡುವುದನ್ನು ತಡೆಗಟ್ಟಬಹುದು ಎಂದು ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಹೇಳಿದರು.

ನಗರದ ಮಹಿಳಾ ಸಮಾಜ ಶಾಲೆಯಲ್ಲಿ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ರೋಗವಾಹಕ ಅಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ವತಿಯಿಂದ ಏರ್ಪಡಿಸಿದ್ದ ಡೆಂಗ್ಯೂ, ಚಿಕನ್‌ಗುನ್ಯ ಮತ್ತು ಮಲೇರಿಯಾ ರೋಗಗಳು ಹರಡದಂತೆ ಮುಂಜಾಗ್ರತೆ ಕ್ರಮ ವಹಿಸುವ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಂಗಳವಾರ ಮಾತನಾಡಿದರು.

ಮನೆಯ ಸುತ್ತ ಮುತ್ತಲಿನ ಪರಿಸರ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ರಾತ್ರಿ ಮಲಗುವ ವೇಳೆಯಲ್ಲಿ ಮೈ ತುಂಬಾ ಬಟ್ಟೆಗಳನ್ನು ಧರಿಸಬೇಕು. ಸೊಳ್ಳೆ ಪರದೆ, ಸೊಳ್ಳೆ ಬತ್ತಿಗಳನ್ನು ಕಡ್ಡಾಯವಾಗಿ ಬಳಸಬೇಕು. ಮನೆಯಲ್ಲಿನ ತೊಟ್ಟಿ, ಬ್ಯಾರಲ್, ಡ್ರಮ್‌ಗಳಲ್ಲಿನ ನೀರನ್ನು ವಾರಕ್ಕೊಮ್ಮೆಯಾದರು ಖಾಲಿ ಮಾಡಿ ಸ್ವಚ್ಛಗೊಳಿಸಿ ಪುನಃ ನೀರು ತುಂಬಿಸಬೇಕು ಮತ್ತು ಎಲ್ಲಾ ನೀರಿನ ಶೇಖರಣೆಗಳನ್ನು ಮುಚ್ಚಿಡಬೇಕು. ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ಸೊಳ್ಳೆ ಕಚ್ಚದಂತೆ ನಿಗಾವಹಿಸಬೇಕು. ಮನೆಯ ಸುತ್ತಮುತ್ತಲು ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಜ್ವರ ಕಾಣಿಸಿಕೊಂಡ ತಕ್ಷಣವೇ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆದು ಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಅವರು ಶಾಲೆಯ ಮಕ್ಕಳಿಗೆ ಲಾರ್ವಾ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು. ಬಳಿಕ ಡೆಂಗ್ಯೂ, ಚಿಕನ್ ಗುನ್ಯ, ಮಲೇರಿಯಾ ನಿಯಂತ್ರಣ ಕ್ರಮಗಳ ಕುರಿತು ಜಾಗೃತಿ ಮೂಡಿಸುವ ಪೋಸ್ಟರ್‌ನ್ನು ಬಿಡುಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಆಡಳಿತಾಧಿಕಾರಿ ರಾಘವೇಂದ್ರ ಅಚಾರ್, ಆರೋಗ್ಯ ಇಲಾಖೆ ಮೇಲ್ವಿಚಾರಕ ಚನ್ನಬಸವ, ಸಿಬ್ಬಂದಿ ಕೌಶಿಕ್ ಇದ್ದರು.

# ವೃದ್ಧಾಶ್ರಮ ಆರಂಭಿಸಲು ಸ್ವಯಂಸೇವಾ ಸಂಸ್ಥೆಗಳಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಕಂದಾಯ ಉಪವಿಭಾಗದ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರ ವೃದ್ಧಾಶ್ರಮವನ್ನು ಪ್ರಾರಂಭಿಸಲು ಅರ್ಹ ಸ್ವಯಂಸೇವಾ ಸಂಸ್ಥೆಗಳ ಅರ್ಜಿ ಅಹ್ವಾನಿಸಲಾಗಿದೆ.

ಅರ್ಹ ಆಸಕ್ತಿಯುಳ್ಳ ಸಂಸ್ಥೆಯವರು ಜೂ.5 ರಿಂದ ಜೂ.30 ರೊಳಗಾಗಿ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಆಗಾಘೆ ಎಜಿ ಪ್ರಾರ್ಥನಾಲಯ ಎದರು ರಸ್ತೆ, ಡಿಸಿ ಸಿವಿಲ್ ಇಂಜಿನಿಯರ್ ಕಟ್ಟಡ, ಅಮರಾವತಿ, ಹೊಸಪೇಟೆ. ಕಚೇರಿಯ ಅವಧಿಯಲ್ಲಿ ಸಂಪರ್ಕಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜಿನೇಯ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಕೇಂದ್ರ ಸುತ್ತಲೂ ನಿರ್ಬಂಧ : ಡಿಸಿ

## 3 ಕೇಂದ್ರಗಳು, ಜೂ.06 ರಿಂದ ಜೂ.10 ವರೆಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದಲ್ಲಿ ಜೂ.06 ರಿಂದ ಜೂ.10 ವರೆಗೆ ಒಟ್ಟು 3 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ-2 ರ ಮೌಲ್ಯಮಾಪನಗಳು ಜರುಗಲಿದ್ದು, ಮೌಲ್ಯಮಾಪನಗಳು ಸುಗಮವಾಗಿ ನಡೆಯುವ ಸಲುವಾಗಿ ಮೌಲ್ಯಮಾಪನ ಗಳ ಕೇಂದ್ರಗಳ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ.

ಮೌಲ್ಯಮಾಪನಗಳ ಕೇಂದ್ರಗಳ ಪ್ರದೇಶದಲ್ಲಿ ಯಾವುದೇ ಬಾಹ್ಯ, ಅನ್ಯ ವ್ಯಕ್ತಿಗಳಿಗೆ ಹಾಗೂ ಮಾಧ್ಯಮದವರು ಪತ್ರಕರ್ತರಿಗೆ ಪ್ರವೇಶ ನಿಷೇಧಿಸಿದೆ. ಈ ಆದೇಶವು ಎಸ್ಸೆಸ್ಸೆಲ್ಸಿ ಪರೀಕ್ಷೆ-2 ರ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

**For Advertisements**
Contact: 9448633038

**ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ 583 276,**
**ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ**
**ದೂರವಾಣಿ ಸಂಖ್ಯೆ: 08394-228457**

ಸಂಖ್ಯೆ:ಕವಿಹಂ:ಕೇಂಖಘ:ಕುಸ:ಇಂ.ನೆ.ಸ್ವಿಚಸ್:ಅ.ಟೆಂಡರ್:2025-26
ದಿನಾಂಕ: 31-05-2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕನ್ನಡ ವಿಶ್ವವಿದ್ಯಾಲಯದ ಗಣಕ ಕೇಂದ್ರದ ಇಂಟರ್‌ನೆಟ್ ಬಳಕೆಗಾಗಿ ಇಂಟರ್‌ನೆಟ್ ಸ್ವಿಚ್‌ಬೋರ್ಡ್ ಮತ್ತು ಅಗತ್ಯ ಉಪಕರಣಗಳ ಖರೀದಿ ಹಾಗೂ ಅಳವಡಿಕೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

1. ಅರ್ಜಿ ಶುಲ್ಕ ರೂ.590/-(ತೆರಿಗೆ ಸೇರಿ)ಗಳನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಇವರ ಹೆಸರಿಗೆ ಬ್ಯಾಂಕ್ ಆಫ್ ಇಂಡಿಯಾ, ಕಮಲಾಪುರ ಶಾಖೆಯಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ಅಥವಾ ಹಣಕಾಸು ವಿಭಾಗದ ಚಲನ್ ಮೂಲಕ ನಗದು ಪಾವತಿಸಿ, ಸದರಿ ಚಲನ್‌ನ್ನು ಕುಲಸಚಿವರ ಆಪ್ತಶಾಖೆಯಲ್ಲಿ ಸಲ್ಲಿಸಿ ಟೆಂಡರ್ ಫಾರಂನ್ನು ಪಡೆಯುವುದು. 2. ಟೆಂಡರ್ ಫಾರಂನ್ನು ಪಡೆಯಲು ಕೊನೆಯ ದಿನಾಂಕ 16.06.2025. 3. ಖಾಲಿ ಟೆಂಡರ್ ಫಾರಂ ಪಡೆದವರು ಅರ್ಜಿಯೊಂದಿಗೆ ಇಂ.ಎಂ.ಡಿ. ಮೊತ್ತ ರೂ.12,500/-ಗಳ ಡಿ.ಡಿಯನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಇವರ ಹೆಸರಿಗೆ ಕಮಲಾಪುರ ಶಾಖೆಯಲ್ಲಿ ಸಂದಾಯವಾಗುವಂತೆ ಸಲ್ಲಿಸುವುದು. 4. ಭರ್ತಿಮಾಡಿದ ಟೆಂಡರ್ ಫಾರಂನ್ನು ಸ್ವೀಕರಿಸುವ ಕೊನೆಯ ದಿನಾಂಕ 19.06.2025. ಸಂಜೆ 3.00 ಗಂಟೆಯವರೆಗೆ ಇರುತ್ತದೆ. ಅದೇ ದಿನ ಸಂಜೆ 4.30ಗಂಟೆಗೆ ಸದರಿ ಟೆಂಡರ್‌ನ್ನು ತೆರೆಯಲಾಗುವುದು. 5. ಯಾವುದೇ ಕಾರಣಕ್ಕೂ ಟೆಂಡರ್ ಫಾರಂನ ಹಣ ಮರಳಿಸಲಾಗುವುದಿಲ್ಲ. 6. ಎಲ್ಲಾ ಹಕ್ಕುಗಳನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ ಹಾಗೂ ಯಾವುದೇ ಕಾರಣವಿಲ್ಲದೆ ಟೆಂಡರ್ ಮುಂದೂಡುವ, ರದ್ದುಗೊಳಿಸುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ. 7. ಅಪೂರ್ಣವಾಗಿ ತುಂಬಿದ ಹಾಗೂ ತಿದ್ದುಪಡಿ ಮಾಡಿದ ಕಡೆ ಸಹಿ ಮಾಡದೇ ಇರುವ ಟೆಂಡರ್ ಫಾರಂಗಳನ್ನು ತಿರಸ್ಕರಿಸಲಾಗುವುದು. 8. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 08394-228457ರಲ್ಲಿ ಮೊಸಂ.9448083955 ಸಂಪರ್ಕಿಸಬಹುದಾಗಿದೆ.

**ಸಹಿ/-ಕುಲಸಚಿವರು.**

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/84




## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**05-06-2025 – ಗುರುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ಸಿದ್ಧಿ |
| ಕರಣ | : ತೈತುಲ |
| ಸೂರ್ಯೋದಯ | : 06:41:50 |
| ಸೂರ್ಯಾಸ್ತ | : 19:09:18 |
| ರಾಹು ಕಾಲ | : 14:07–15:47 |
| ಯಮಘಂಡ ಕಾಲ | : 05:42–07:23 |
| ಗುಳಿಕ ಕಾಲ | : 09:04–10:45 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 04-06-2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1599.15 ಅಡಿ |
| ಒಳ ಹರಿವು | 8222 ಕ್ಯುಸೆಕ್ |
| ಹೊರ ಹರಿವು | 247 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 20.447 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.72 ಅಡಿ |
| ಒಳ ಹರಿವು | 659 ಕ್ಯುಸೆಕ್ |
| ಹೊರ ಹರಿವು | 25 ಕ್ಯುಸೆಕ್ |
| ಸಾಮರ್ಥ್ಯ | 3.462 ಟಿಎಂಸಿ |

## ಮೈಕ್ರೋ ನ್ಯೂಸ್

### ಸಹಾಯವಾಣಿ ಕೇಂದ್ರ ಆರಂಭಿಸಲು ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಅರ್ಜಿ ಅಹ್ವಾನಿಸಲಾಗಿದೆ.

ಅರ್ಹ ಆಸಕ್ತಿಯುಳ್ಳ ಸಂಸ್ಥೆಯವರು ಜೂ.5 ರಿಂದ ಜೂ.30 ರೊಳಗಾಗಿ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಆಗಾಫೆ ಎಜಿ ಪ್ರಾರ್ಥನಾಲಯ ಎದರು ರಸ್ತೆ, ಡಿಸಿ ಸಿವಿಲ್ ಇಂಜಿನಿಯರ್ ಕಟ್ಟಡ, ಅಮರಾವತಿ, ಹೊಸಪೇಟೆ. ಕಚೇರಿಯ ಅವಧಿಯಲ್ಲಿ ಸಂಪರ್ಕಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜಿನೇಯ ತಿಳಿಸಿದ್ದಾರೆ.

# ಆರ್.ಸಿ.ಬಿ ಒಂದು ತಂಡ ಕೋಟಿ ಕನಸು

**ಕೊಟ್ರೇಶ.ಅಕ್ಕಿ, ಉಪನಾಯಕನಹಳ್ಳಿ**



ಭಾರತದಲ್ಲಿ ಇರುವುದು ಎರಡು ವರ್ಗ ಒಂದು ಬಿ.ಪಿ.ಎಲ್ ಮತ್ತೊಂದು ಐ.ಪಿ.ಎಲ್ ಎಂದು ಖ್ಯಾತ ಪತ್ರಕರ್ತರಾದ ಪಿ ಸಾಯಿನಾಥ ಅವರು ಹೇಳುತ್ತಾರೆ.ಅಷ್ಟರ ಮಟ್ಟಿಗೆ ಕ್ರಿಕೆಟ್ ಬೆರೆತು ಹೋಗಿದೆ.ನಿನ್ನೆ ಅಹಮದಾಬಾದ್ ನಲ್ಲಿ ನಡೆದ ಐಪಿಎಲ್ – 18 ರ ಆವೃತ್ತಿಯ ಕಿರೀಟ್ ವನ್ನು ನಮ್ಮ ಕನ್ನಡ ಮಣ್ಣಿನ ರಾಯಲ್ ಚಾಲೆಂಜ್ ಬೆಂಗಳೂರು ತಂಡವು ಧರಿಸಾಗಿದೆ. ಇದೊಂದು ಟ್ರೋಪಿ ಕನ್ನಡಿಗರಿಗೆ ಮತ್ತು ದೇಶ ,ಕಾಲ ,ಬಾಷೆ ಮೀರಿ ಆರ್ ಸಿ ಬಿ ಯನ್ನು ಆರಾಧಿಸುವ ಕೋಟಿ ಕೋಟಿ ಅಭಿಮಾನಿಗಳಿಗೆ ಕನಸಾಗಿ ಉಳಿದು ಹೋಗಿತ್ತು. ನಿನ್ನೆ ರಾತ್ರಿ ಅದು ಬರಿ ರಾತ್ರಿಯಲ್ಲ ಕೋಟಿ ಕೋಟಿ ಅಭಿಮಾನಿಗಳ ಕನಸು ನನಸಾದ ನಿಜದ ಬೆಳಗು.

ಆರ್ .ಸಿ.ಬಿ ತಂಡವು IPL ಆಡುವ ತಂಡಗಳಲ್ಲಿ ಅತಿ ಹೆಚ್ಚಿನ ಅಭಿಮಾನಿಗಳನ್ನು ಹೊಂದಿರುವ ಹಲವು ತಂಡಗಳಲ್ಲಿ ಒಂದಾಗಿದೆ .ತಲಾ ಐದು ಬಾರಿ ಟ್ರೋಪಿಗಳನ್ನು ಪಡೆದು ಕೊಂಡಿರುವ ಮುಂಬೈ ಹಾಗೂ ಚೆನ್ನೈ ತಂಡಗಳದ್ದು ಗೆದ್ದವರ ಕತೆ ಆದರೆ. 17ಬಾರಿ ಸೋತು 18 ನೇ ಬಾರಿ ಟ್ರೋಪಿಯನ್ನು ತನ್ನ ಹೆಸರಿಗೆ ಬರೆದಕೊಂಡು ಆರ್.ಸಿ.ಬಿ ಯದ್ದು ಸೋತು ಗೆದ್ದವರ ಕತೆ.ಅದೆಷ್ಟು ಅವಮಾನಗಳು ಅದೆಷ್ಟು ನೋವುಗಳು ಪ್ರತಿ ಬಾರಿಯು ವಿಶ್ವದ ಅಗ್ರಮಾನ್ಯ ಆಟಗಾರರನ್ನು ಒಳಗೊಂಡ ತಂಡ ಸಿದ್ದಗೊಂಡು ಆಡಲು ಹೋಗುತ್ತಿತ್ತು.ಪ್ರತಿ ಸಲವು ಅಭಿಮಾನಿಗಳು ಈ ಸಲ ಕಪ್ ನಮ್ದೆ ಎನ್ನುವ ಅತಿಯಾದ ಭರವಸೆಯೊಂದಿಗೆ ಹೋಗುತ್ತಿದ್ದರು. ಈ ಸಲ ಬರಲಿಲ್ಲ ಮುಂದಿನ ಸರಿ ನಿಮ್ದೆ ಎನ್ನುವ ವಿರೋಧಿ ತಂಡದ ಅಭಿಮಾನಿಗಳ ಮಾತು .ಕೊಂಕು.ಸಾಮಾಜಿಕ ಜಾಲತಾಣದಲ್ಲಿ ಆರ್.ಸಿ.ಬಿ ಯನ್ನು ಗುರಿಯಾಗಿಸಿಕೊಂಡು ಮಾಡುತ್ತಿದ್ದ ಮೊದಲಿಕೆಗಳಿಗೆ ಕಡಿಮೆ ಇರಲಿಲ್ಲ. ಅದೆಲ್ಲನ್ನು ಸಹಿಸಿ ಕೊಂಡು ನನ್ನ ತಂಡ ನನ್ನ ಹೆಮ್ಮೆ ನನ್ನ ಆರ್ಸಿಬಿ ಎನ್ನುತ್ತ ಇಂದಲ್ಲ ನಾಳೆ ಗೆಲುವು ನಮ್ಮದಾಗುವುದು ಎನ್ನುವ ಭರವಸೆಯೊಂದಿಗೆ ಸದಾ ತಂಡವನ್ನ ಬೆಂಬಲಿಸಿದ ಕೋಟಿ ಅಭಿಮಾನಿಗಳ ಆಸೆ ಹಂಬಲ ಈಡೇರಿದೆ

ಈ ಹಿಂದೆ ಕ್ರಿಕಟ್ ಜಗತ್ತು ಕಂಡ ಅನೇಕ ದಿಗಜ್ಜ ಆಟಗಾರರಾದ ಅನಿಲ್ ಕುಂಬ್ಳೆ, ರಾಹುಲ್ ಡ್ರಾವಿಡ್, ಕ್ರಿಸ್ ಗೇಲ್, ಎಬಿಡಿ, ಡೂಪ್ಲೆಸಿ .ಡೇನಿಯಲ್ ವೆಟ್ಟೋರಿ, ಕೆವಿನ್ ಪೀಟರಸನ್, ಜಾಕ್ ಕಾಲಿಸ್ ಇವರೆಲ್ಲರು ಕೂಡ ಇದ್ದಾಗಲು ಆರ್ಸಿಬಿ ಕಪ್ ಎತ್ತಿರಲಿಲ್ಲ. ಇದು ನಾಲ್ಕನೇ ಬಾರಿ ಫೈನಲ್ ತಲುಪಿತ್ತು.ಪ್ರತಿ ಬಾರಿ ಪ್ರಾಂಚೈಸಿ ಏನಾದರು ಹೊಸತು ಮಾಡುತ್ತಿತ್ತು. ಲೋಗೋ ಬದಲಾವಣೆ, ಉಡುಗೆ ಬದಲಾವಣೆ ಮಾಡಿದಾಗೆಲ್ಲ ,ತಂಡದ ಕುರಿತು ಕುಹಕಾದ ಮಾತುಗಳು ಕೇಳಿ ಬಂದಿದ್ದವು.ಈ ಬಾರಿ ಹೊಸ ನಾಯಕ ರಜತ್ ಪಟೇದಾರ, ಟೀಮ್ ಮೆಂಟರ್ ದಿನೇಶ ಕಾರ್ತಿಕ, ಕೋಚ್ ಆ್ಯಂಡಿ ಪ್ಲವರ್ ಅವರ ಮಾರ್ಗದರ್ಶನದಲ್ಲಿ ಕಪ್ ಜಯಿಸಿದೆ.

2008 ರಲ್ಲಿ ಮೊದಲ ಐಪಿಎಲ್ ಶುರುವಿನಲ್ಲಿ ಬೆರಗುಗಣ್ಣಿನ ಹುಡಗನಾಗಿ ಆರ್ ಸಿ ಬಿ ತಂಡ ಪ್ರತಿನಿಧಿಸಿದ್ದ ವಿರಾಟ್ ಕೊಹ್ಲಿ ಇಂದು ಜಗತ್ತು ಕಂಡ ಅಗ್ರಮಾನ್ಯ ಶ್ರೇಷ್ಠ ಕ್ರಿಕೆಟ್ ಆಟಗಾರನೆಂಬುದು ಜಗತ್ತಿಗೆ ಗೊತ್ತು.ಆದರೆ ಐಪಿಎಲ್ ಟ್ರೋಪಿ ಮಾತ್ರ ಕೊಹ್ಲಿ ಪಾಲಿಗೆ ಕನಸಾಗಿ ಉಳಿದಿತ್ತು. ಅದೆಷ್ಟು ಪಂದ್ಯಗಳನ್ನು ಏಕಾಂಗಿಯಾಗಿ ಹೋರಾಡಿ ಭಾರತಕ್ಕೆ ಗೆಲ್ಲಿಸಿ ಕೊಟ್ಟವನಿಗೆ ,ತನಗೆ ಮಿಡಿಯುವ ಅಭಿಮಾನಿಗಳಿಗೆ ಹಾಗೂ ಈ ತಂಡಕ್ಕೆ ಕಪ್ ಗೆಲ್ಲಿಸಿ ಕೊಟ್ಟಿಲ್ಲ ಎನ್ನುವ ಕೊರಗು ಇತ್ತು.ಪ್ರತಿ ಸಿಸನ್ ತಂಡ ಕಪ್ ಸನಿಹ ಬಂದಾಗ ಅದೆಷ್ಟು ಅಭಿಮಾನಿಗಳು ಕೊಹ್ಲಿಗಾಗಿ ಕಪ್ ಕೊಡಿಸಿಬಿಡು ದೇವರೆ ಅಂತಾ ಬೇಡಿಕೊಂಡಿದ್ದು ಉಂಟು.ವಿರಾಟ್ ಕೊಹ್ಲಿ ಜರ್ಸಿ ನಂ 18 ಈ ಬಾರಿ ಐಪಿಎಲ್ ಸಿಸನ್-18 ,ಹಾಗಾಗಿ ಇದು ನಮ್ದೆ ಕಪ್ ಎನ್ನುವ ಹಂಬಲದೊಂದಿಗೆ ಶುರು ಮಾಡಿದ್ದರು. .ಪ್ರತಿ ಪಂದ್ಯದಲ್ಲಿ ಒಬ್ಬೊಬ್ಬರು ಪಂದ್ಯದ ಪುರುಷೋತ್ತಮ ಪಡೆದು , ಈ ಬಾರಿಯ ಆರ್ ಸಿ ಬಿ ಅದೆಷ್ಟು ಬಲಿಷ್ಟ ತಂಡವೆಂದು ತೋರಿಸಿದ್ದರು.ಇದು ವಿರಾಟ್ ಕೊಹ್ಲಿಗೆ ರಜತ್ ಮತ್ತು ಉಳಿದ ಆಟಗಾರರನು ನೀಡಿದ ಒಲವಿನ ಉಡುಗೊರೆ ಎಂದರೆ ತಪ್ಪಗಲಾರದು.

ಕನ್ನಡ ನೆಲಕ್ಕೂ ಕ್ರಿಕೆಟ್ಗು ಅವಿನಾಭಾವ ಸಂಬಂಧವಿದೆ.ಭಾರತಕ್ಕೆ ಅನೇಕ ದಿಗಜ್ಜ ಆಟಗಾರರನ್ನು ಕೊಟ್ಟು ನೆಲ ನಮ್ಮದು..ಭಾರತ ದೇಶಿ ಕ್ರಿಕೆಟ್ ನಲ್ಲಿ ನಡೆಯುವ ರಣಜಿ ಟ್ರೋಪಿ .ಸಯ್ಯದ ಅಲಿ ಮುಷ್ತಾಕ ಟ್ರೋಪಿ ಇನ್ನು ಅನೇಕ ಟ್ರೋಪಿ ಮುಡಿಗೇರಿಸಿ ಕೊಂಡಿದ್ದ ಕನ್ನಡಾಂಬೆಗೆ ಈ ಐಪಿಎಲ್ ಟ್ರೋಪಿಯನ್ನುವುದು ಮರಿಚಿಕೆಯಾಗಿತ್ತು. ಕೆಂಪೇಗೌಡರು ಕಟ್ಟಿದ ದೇಶದ ಮಹಾನಗರಿ ಬೆಂಗಳೂರು ನಮ್ಮ ರಾಜದಾನಿ ಹೆಸರು ಇಟ್ಟು ಕೊಂಡು ರಾಯಲ್ ಚಾಲೆಂಜ್ ಬೆಂಗಳೂರು ತಂಡ ಒಂದೇ ಒಂದು ಟ್ರೋಪಿ ಜಯಿಸಿಲ್ಲ ಎನ್ನುವುದು ಕೂಡ ಕನ್ನಡದ ಕ್ರಿಕೆಟ್ ಪ್ರೇಮಿಗಳ ಅಳಲಾಗಿತ್ತು. ಈ ಬಾರಿ ತಂಡವು 18 ನೇ ಐಪಿಎಲ್ ಟ್ರೋಪಿ ಗೆದ್ದಿದೆ.ದೇಶದ ಅನೇಕ ಮಹಾನಗರಗಳಲ್ಲಿ ಅಭಿಮಾನಿಗಳು ಸಂಭ್ರಮ ಹೊನಲು ಹರಿಸಿದ್ದಾರೆ.ಕನ್ನಡ ನಾಡಿನ ಎಲ್ಲ ನಗರ,ಊರು ಕೇರಿಗಳಲ್ಲಿ ಆರ್ ಸಿ ಬಿ ಗೆಲುವನ್ನ ಹಬ್ಬದಂತೆ ಆಚರಿಸಿದ್ದಾರೆ.ಸರ್ಕಾರವು ಕೂಡ ಗೆದ್ದ ತಂಡವನ್ನು ವಿಧಾನಸೌದಕ್ಕೆ ಕರೆಸಿ ಸನ್ಮಾನ ಮಾಡುತ್ತಿದ್ದು ನಮಗೆಲ್ಲ ಹರ್ಷದಾಯಕ.ಎಲ್ಲ ಅಭಿಮಾನಿಗಳಲ್ಲಿ ಒಂದೇ ಕೋರಿಕೆ ನಮ್ಮ ಗೆಲುವಿನ ಸಂಭ್ರಮ ಇನ್ನೊಬ್ಬರಿಗೆ ಕಿರಿಕಿರಿಯಾಗಬಾರದು.ವಿರೋದಿಗಳು ಕೂಡ ನಮ್ಮ ಗೆಲುವನ್ನ ಸಂಭ್ರಮಿಸುವಂತೆ ಆಚರಿಸೋಣ.ಸೋಲೆ ಗೆಲುವಿನ ಮೆಟ್ಟಿಲು ಎನ್ನುವ ನಾಡನುಡಿಯನ್ನು ಜೀವಂತವಾಗಿಸಿದ ಆರ್ ಸಿ ಬಿ ತಂಡಕ್ಕೆ ಸಲಾಮ್ ಹೇಳೋಣ ಈ ಸಲ ಕಪ್ ನಮ್ದು, ಜೈ ಆರ್ಸಿಬಿ

# ಬಕ್ರೀದ್ ಹಬ್ಬ : ಮದ್ಯದಂಗಡಿ ಮುಚ್ಚಲು ಆದೇಶ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಬಕ್ರೀದ್ ಹಬ್ಬದ ನಿಮಿತ್ತ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ಉಪವಿಭಾಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳನ್ನು ಜೂ.7 ರಂದು ಬೆಳಿಗ್ಗೆ 06 ಗಂಟೆಯಿಂದ ಜೂ.8 ರಂದು ಬೆಳಿಗ್ಗೆ 06 ಗಂಟೆಯವರೆಗೆ ಮುಚ್ಚುವಂತೆ, ಸಾಗಾಣಿಕೆ ಹಾಗೂ ಮದ್ಯ ಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ್ ಆದೇಶಿಸಿದ್ದಾರೆ.

ಜಿಲ್ಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಮತ್ತು ಈ ಹಬ್ಬದ ದಿನಗಳಲ್ಲಿ ರಾತ್ರಿ ವೇಳೆಯಲ್ಲಿ ಹೆಚ್ಚಿನ ಜನ ಸೇರುವ ಸಾಧ್ಯತೆಗಳು ಇರುವುದರಿಂದ ಸಾರ್ವಜನಿಕರು ಮದ್ಯ ಸೇವನೆ ಮಾಡುವುದು, ಕುಡಿದು ಅಮಲಿನಲ್ಲಿ ವಾಹನ ಚಾಲನೆ ಮಾಡುವುದರಿಂದ ಗಲಾಟೆಗಳು ಮತ್ತು ಅಪಘಾತಗಳು ಆಗುವ ಸಾಧ್ಯತೆಗಳು ಇರುವ ಕಾರಣ ಹಗರಿಬೊಮ್ಮನಹಳ್ಳಿ, ಮರಿಯಮ್ಮನಹಳ್ಳಿ, ತಂಬ್ರಹಳ್ಳಿ, ಕೂಡ್ಲಿಗಿ, ಹೊಸಹಳ್ಳಿ, ಕೊಟ್ಟೂರು, ಗುಡೇಕೋಟೆ, ಇಟ್ಟಿಗಿ, ಹಡಗಲಿ, ಹರಪನಹಳ್ಳಿ,ಚಿಗಟೇರಿ,ಹಲವಾಗಲು ಮತ್ತು ಅರಸೀಕೆರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿನ ಮದ್ಯದಂಗಡಿ, ಬಾರ್ & ರೆಸ್ಟೋರೆಂಟ್ ಮತ್ತು ಇತರೆ ಸ್ಥಳಗಳಲ್ಲಿ ಮದ್ಯ ಮಾರಾಟ ಮಾಡದಂತೆ ಹಾಗೂ ಮದ್ಯದಂಗ ಡಿಗಳನ್ನು ಮುಚ್ಚುವಂತೆ ನಿಷೇದಾಜ್ಞೆ ಜಾರಿಗೊಳಿಸುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

# ಕಾಲ್ತುಳಿತ ಮೃತರ ಕುಟುಂಬಕ್ಕೆ ತಲಾ 10 ಲಕ್ಷ ರೂ.ಗಳ ಪರಿಹಾರ

## ಗಾಯಾಳುಗಳಿಗೆ ಉಚಿತ ಚಿಕಿತ್ಸೆ : ಸಿಎಂ.ಸಿದ್ದರಾಮಯ್ಯ

**ಹಂಪಿ ಟೈಮ್ಸ್ ಬೆಂಗಳೂರು**



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್ ಸಿ ಬಿ ತಂಡಕ್ಕೆ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಕಾರ್ಯಕ್ರಮವನ್ನು ವೀಕ್ಷಿಸಲು ಆಗಮಿಸಿದ್ದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿದ ದುರಂತದಲ್ಲಿ 11 ಜನರು ಸಾವಿಗೀಡಾಗಿದ್ದು, ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ.ಗಳ ಪರಿಹಾರವನ್ನು ಸರ್ಕಾರ ಘೋಷಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಾವೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಿಧಾನ ಸೌಧದ ಬಳಿ ನಡೆದ ಆರ್ ಸಿ ಬಿ ತಂಡದ ಅಭಿನಂದನಾ ಕಾರ್ಯಕ್ರಮದಲ್ಲಿ ಯಾವುದೇ ಸಾವು ಸಂಭವಿಸಿಲ್ಲ. ಆದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಉಂಟಾಗಿದ್ದು, 11 ಜನ ಸಾವಿಗೀಡಾಗಿದ್ದಾರೆ. 33 ಜನ ಗಾಯಾಳುಗಳಾಗಿದ್ದಾರೆ. ಎಲ್ಲ ಗಾಯಗೊಂಡವರಿಗೆ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ತಿಳಿಸಿದರು.

**ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ**

ಗಾಯಗೊಂಡವರ ಆರೋಗ್ಯದ ಬಗ್ಗೆ ವೈದ್ಯರೊಂದಿಗೆ ಚರ್ಚಿಸಲಾಗಿದ್ದು, ಅವರೆಲ್ಲರೂ ಪ್ರಾಣಾಪಾಯದಿಂದ ಪಾರಾಗಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಅವರಿಗೆ ಸಾರಿಗೆ, ಊಟದ ವ್ಯವಸ್ಥೆಗಳನ್ನು ಸರ್ಕಾರ ಒದಗಿಸಲಿದೆ. ಇದು ಅನಿರೀಕ್ಷಿತ ದುರಂತ. ಯುವಕ ಯುವತಿಯರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

**ತನಿಖೆ ನಂತರ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ**

ಈ ಘಟನೆಯ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮ್ಯಾಜಿಸ್ಟ್ರೇಟ್ ತನಿಖೆಯನ್ನು ನಡೆಸಲು ಸೂಚನೆ ನೀಡಲಾಗಿದೆ. 15 ದಿನದಲ್ಲಿ ತನಿಖಾ ವರದಿ ನೀಡುವಂತೆ ಸೂಚಿಸಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

**ಘಟನೆಯ ಬಗ್ಗೆ ರಾಜಕೀಯ ಮಾಡುವುದಿಲ್ಲ**

ಇದು ಅನಿರೀಕ್ಷಿತ ಘಟನೆಯಾಗಿದ್ದು, ಕಾರ್ಯಕ್ರಮಕ್ಕೆ ಈ ಸಂಖ್ಯೆಯಲ್ಲಿ ಜನ ಆಗಮಿಸುವ ನಿರೀಕ್ಷೆಯಿರಲಿಲ್ಲ .ಈ ಬಗ್ಗೆ ಸರ್ಕಾರದ ವಿರುದ್ಧ ಕೇಳಿಬರುತ್ತಿರುವ ಟೀಕೆಗಳ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಘಟನೆಯ ಬಗ್ಗೆ ರಾಜಕೀಯ ಮಾಡುವುದಿಲ್ಲ. ನಾನು ಈ ಘಟನಯನ್ನು ಸಮರ್ಥಿಸಿಕೊಳ್ಳುವುದಿಲ್ಲ.. ಇಂತಹ ಜನಸಾಗರವನ್ನು ಯಾರು ನಿರೀಕ್ಷಿಸಿರಲಿಲ್ಲ. ಕ್ರೀಡಾಂಗಣದಲ್ಲಿ 35 000 ಜನರ ಸಾಮರ್ಥ್ಯವಿದ್ದು, ಇಲ್ಲಿಗೆ 2 ರಿಂದ 3 ಲಕ್ಷ ಆಗಮಿಸಿದ್ದಾರೆ. ಭದ್ರತಾ ವೈಫಲ್ಯ ಸೇರಿದಂತೆ ದುರಂತಕ್ಕೆ ಕಾರಣಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದರು.

ಸಾರ್ವಜನಿಕರು ಘಟನೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು ಎಂಬುದಕ್ಕೆ ಪ್ರತಿಕ್ರಿಯೆ ನೀಡಿ, ನನಗೆ ದೊರೆತ ಮಾಹಿತಿ ಪ್ರಕಾರ ಯಾವುದೇ ಘಟನೆಗಳು ವಿಧಾನಸೌಧದಲ್ಲಿನಡೆದಿಲ್ಲಎಂದುಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

ಅಭಿನಂದನಾ ಸಮಾರಂಭ ಮಾಡಲು ಆತುರವೇನಿತ್ತು ಎಂದು ಟೀಕೆ ವ್ಯಕ್ತವಾಗುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಸಮಾರಂಭವನ್ನು ಕ್ರಿಕೆಟ್ ಅಸೋಸಿಯೇಷನ್ ಅವರು ಆಯೋಜಿಸಲು ಬಯಸಿ ಅನುಮತಿ ಕೋರಿದ್ದರ ಹಿನ್ನೆಲೆಯಲ್ಲಿ ಅನುಮತಿ ನೀಡಲಾಗಿತ್ತು. ಈ ದುರಂತ ಕ್ಕೆ ಸರ್ಕಾರ ದು:ಖ ವ್ಯಕ್ತಪಡಿಸುತ್ತದೆ. ಕ್ರಿಕೆಟ್ ಅಸೋಸಿಯೇಷನ್ ಅವರ ಈ ಕಾರ್ಯಕ್ರಮದಲ್ಲಿ ಪೊಲೀಸ್ ಭದ್ರತೆ ಒದಗಿಸುವುದಷ್ಟೇ ಸರ್ಕಾರದ ಕರ್ತವ್ಯ. ಆದ್ದರಿಂದ ತನಿಖೆ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದರು.

# ನಕಲಿ ಪತ್ರಕರ್ತರ ಹಾವಳಿ ತಡೆಗೆ ಆಗ್ರಹ

## ಬೆದರಿಸಿದವರ ವಿರುದ್ಧ ದೂರು ನೀಡಿದರೆ ಕ್ರಮ : ಪಿಎಸ್ಐ



**ಹಂಪಿ ಟೈಮ್ಸ್ ಕೊಟ್ಟೂರು**

ಪಿಆರ್‌ಜಿಐ ನಿಯಮಾನುಸಾರ ಪತ್ರಿಕೆ ಮುದ್ರಣಗೊಳ್ಳದ ಕೆಲ ಪತ್ರಿಕೆಗಳು ಮತ್ತು ಪತ್ರಕರ್ತರ ಹೆಸರಲ್ಲಿ ಯೂಟ್ಯೂಬರ್ ಹಾವಳಿ ಹೆಚ್ಚಾಗಿದ್ದು, ನಕಲಿ ಪತ್ರಕರ್ತರ ಹಾವಳಿ ತಡೆಗಟ್ಟಬೇಕೆಂದು ಒತ್ತಾಯಿಸಿ ಕೊಟ್ಟೂರು ತಾಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿ ಗಳು ಬುಧವಾರ ತಹಶೀಲ್ದಾರ್ ಜಿ.ಕೆ. ಅಮರೇಶಗೆ ಮನವಿ ಸಲ್ಲಿಸಿದರು.

ಇತ್ತೀಚೆಗೆ ಕೆಲ ಪತ್ರಿಕೆಗಳು ಮುದ್ರಣಗೊಳ್ಳದಿದ್ದರೂ ಪಿಡಿಎಫ್ ತೋರಿಸಿ ಅಧಿಕಾರಿಗಳನ್ನು ಬೆದರಿಸುವ ಕೆಟ್ಟ ಸಂಸ್ಕೃತಿ ತಲೆದೋರಿದೆ. ಇದರಿಂದಾಗಿ ನೈಜ ಪತ್ರಕರ್ತರೂ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆಯುವಲ್ಲಿ ಹರ ಸಾಹಸ ಪಡುವಂತಾಗಿದೆ. ಕೂಡಲೇ ನಕಲಿ ಪತ್ರಕರ್ತರ ವಿರುದ್ಧ ಸೂಕ್ತ ಕ್ರಮವಹಿಸಬೇಕು ಎಂದು ಪತ್ರಕರ್ತರು ಒತ್ತಾಯಿಸಿದರು.

ನಂತರ ಪಿ.ಎಸ್.ಐ ಗೀತಾಂಜಲಿ ಶಿಂಧೆ ಅವರಿಗೂ ಮನವಿ ನೀಡಿ ಕ್ರಮಕೈಗೊಳ್ಳಬೇಕೆಂದು ಪತ್ರಕರ್ತರು ಕೋರಿದರು.

ಇದಕ್ಕೆ ಉತ್ತರಿಸಿದ ಪಿ.ಎಸ್.ಐ. ಗೀತಾಂಜಲಿ ಶಿಂಧೆ, ಸರ್ಕಾರಿ ಅಧಿಕಾರಿಗಳು ತಮಗೆ ಬ್ಲಾಕ್ ಮೇಲ್, ಬೆದರಿಕೆವೊಡ್ಡಿದ ಪತ್ರಕರ್ತರ ಹೆಸರನ್ನು ಹೇಳಿದರೆ ಕ್ರಮಕೈಗೊಳ್ಳುವ ಭರವಸೆ ನೀಡಿದರು.

ತಾಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಮನಿ ಸುರೇಶ, ಸಂಘದ ಜಿಲ್ಲಾ ಉಪಾಧ್ಯಕ್ಷ ಉಜ್ಜಿನಿ ರುದ್ರಪ್ಪ, ಕಾರ್ಯದರ್ಶಿ ಎಂ. ರವಿ ಕುಮಾರ್, ತಾಲೂಕು ಕಾರ್ಯದರ್ಶಿ ಬದ್ದಿ ಮಂಜುನಾಥ್, ಸಂಘದ ಮಾಜಿ ಅಧ್ಯಕ್ಷ ಜಿ. ಸೋಮಶೇಖರ್, ಗುರುಪ್ರಸಾದ್, ಬಂದಾತರ ಪ್ರಕಾಶ, ಕೊಟ್ರೇಶ, ನಾಗರಾಜ್, ಚಿಗಟೇರಿ ಕೊಟ್ರೇಶ ಇದ್ದರು.